ಮೊನ್ನೆ ಟಾಟಾ ಸಂಸ್ಥೆಯವರು ನಮಗೂ ಅದಕ್ಕೂ ಯಾವುದೇ ಸಂಬಂಧವಿಲ್ಲ ಎಂದು ಹೇಳಿದ್ದಾರೆ. ಏರ್ ಪೋರ್ಟ್ ಬಂತು...ಬಂತು.... ಎಂದು ಹೇಳುತ್ತಿದ್ದೀರಿ. ಆದರೆ ಟಾಟಾ ಸಂಸ್ಥೆಯವರು ಕೈ ಎತ್ತಿ ಟಾಟಾ ಹೇಳಿ ಹೊರಟು ಹೋದರು. ಹೀಗೆ ಮಾಡಿದರೆ ನಿಮ್ಮಿಂದ ಯಾವ ಮೂಲಭೂತ ಸೌಲಭ್ಯಗಳನ್ನು ಮಾಡುವುದಕ್ಕೆ ಸಾಧ್ಯವಾಗಿದೆ? ಮಾನ್ಯ ಅಧ್ಯಕ್ಷರೇ, ನಾನು ಆಗಲೇ ಹೇಳಿದ ಹಾಗೆ ಕರ್ನಾಟಕ ರಾಜ್ಯದ ಆರ್ಥಿಕ ಬೆಳವಣಿಗೆಗೆ ನಿಮ್ಮಲ್ಲಿ ಯಾವುದೇ ಆಜೆಂಡಾಗಳೂ ಇಲ್ಲ. ಹಾಗಾಗಿ ನಿಮ್ಮಲ್ಲಿ ಯಾವುದೇ ರೀತಿಯಲ್ಲಿ ಆರ್ಥಿಕ ಅಭಿವೃದ್ಧಿಯನ್ನು ಸಾಧಿಸಲು ಬೇಕಾಗುವಂಥ ಮೂಲಭೂತ ಅವಶ್ಯಕತೆಗಳನ್ನು ರೂಪಿಸಲು, ರೂಢಿಸಲು ನಿಮ್ಮಿಂದ ಆಗಲಿಲ್ಲ ಎಂದು ಹೇಳಬೇಕಾಗುತ್ತದೆ.ರಾಜಕೀಯವಾಗಿ ಯೋಚನೆ ಮಾಡಿ, ಚುನಾವಣೆಯ ದೃಷ್ಟಿಯಿಂದಲಾದರೂ ಇದನ್ನು ಮಾಡಿದ್ದೀರೋ ಅಂದರೆ ಅದೂ ಕೂಡ ನಿಮ್ಮಿಂದ ಆಗಿಲ್ಲ. ಆದ್ದರಿಂದ ನಿಮ್ಮಲ್ಲಿ ಮೂಲಭೂತ ಸೌಲಭ್ಯಗಳನ್ನು ಕಲ್ಪಿಸಿಕೊಡುವಲ್ಲಿ ಯಾವುದೇ ಉದ್ದೇಶಗಳು ಇವೆ ಎಂದು ಅನ್ನಿಸುವುದಿಲ್ಲ. ಆ ರೀತಿಯಾದಂಥ ಬಜೆಟ್‌ನ್ನು ತಾವುಗಳು ಮಂಡಿಸಿದ್ದೀರಿ. ಇದರಿಂದ ಯಾರಿಗೂ ಯಾವ ಪ್ರಯೋಜನವೂ ಆಗುವುದಿಲ್ಲ ಎಂದು ಹೇಳಿ, ನನಗೆ ಇಷ್ಟು ಕಾಲಾವಕಾಶ ಕೊಟ್ಟ ಮಾನ್ಯ ಅಧ್ಯಕ್ಷರನ್ನು ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಸಚಿವರ ಹೇಳಿಕೆ

ಮಹಾತ್ಮಗಾಂಧಿರವರಿಗೆ ಜೈಕಾರ ಹಾಕಿದ್ದಕ್ಕೆ ಕಾರ್ಮಿಕನನ್ನು ಅಮಾನತ್ತು ಇಟ್ಟಿರುವ ಬಗ್ಗೆ.

ಶ್ರೀ ಬಿ.ಎಲ್. ಶಂಕರ್ (ಕೈಗಾರಿಕಾ ಸಚಿವರು) :— ಸನ್ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರುಗಳಾದ ವಾಟಾಳ ನಾಗರಾಜ್‌ರವರು, ಶ್ರೀರಾಮರೆಡ್ಡಿಯವರು ಮತ್ತು ಶ್ರೀಮತಿ ಪ್ರಮೀಳರವರು ಮಾತನಾಡತಕ್ಕಂಥ ಸಂದರ್ಭದಲ್ಲಿ ಎನ್‌ಜಿಎಫ್‌ನ ಒಬ್ಬ ಕಾರ್ಮಿಕ ಮಹಾತ್ಮಾ ಗಾಂಧೀಜಿಯವರಿಗೆ ಜೈ ಎಂದು ಹೇಳಿದ್ದಕ್ಕಾಗಿ ಆತನಿಗೆ ಶೋಕಾಸ್ ನೋಟೀಸ್ ಕೊಟ್ಟು ನಿಮ್ಮನ್ನು ಟರ್ಮಿನೇಟ್ ಏಕೆ ಮಾಡಬಾರದು ಎಂದು ಹೇಳಿ ಸಸ್ಪೆಂಡ್ ಕೂಡ ಮಾಡಿದ್ದಾರೆ ಎಂದು ಹೇಳಿದ್ದಾರೆ. ಅದೇ ಕಾರಣಕ್ಕಾಗಿ ಅವರನ್ನು ಸಸ್ಪೆಂಡ್ ಮಾಡಿದ್ದಾರೆ ಎನ್ನುವುದಾದರೆ ಅದರ ಬಗ್ಗೆ ಸೂಕ್ತ ತನಿಖೆಯನ್ನು ಮಾಡಿ ವರದಿಯನ್ನು ಸದನದಲ್ಲಿ ಸಲ್ಲಿಸುತ್ತೇನೆ.

+ಶ್ರೀ ಸಯ್ಯದ್ ಜುಲ್ಫಿಕರ್ ಹಷ್ಮಿ (ಬೀದರ್):— ಸನ್ಮಾನ್ಯ ಅಧ್ಯಕ್ಷರೇ,1999-2000ನೇ ಸಾಲಿನ ಬಜೆಟ್‌ನ್ನು ಮಾನ್ಯ ಆರ್ಥಿಕ ಸಚಿವರಾದ ಸಿದ್ಧರಾಮಯ್ಯನವರು ಮಂಡಿಸಿದ್ದಾರೆ. ಈ ಸಾಲಿನ ಬಜೆಟ್‌ನಲ್ಲಿ ನಮ್ಮ ಹೈದ್ರಾಬಾದ್ ಭಾಗಕ್ಕೆ ಬಹಳ ಅನ್ಯಾಯವಾಗಿದೆ. ತಮಗೆ ಗೊತ್ತಿರುವ ಹಾಗೆ ಗುಲಬರ್ಗ, ರಾಯಚೂರು, ಬೀದರ್ ಜಿಲ್ಲೆಗಳೇನಿವೆ, ಅವುಗಳು ಗುಜ್ರಾಲ್ ಕಮಿಟಿ ರಿಪೋರ್ಟ್, ಅಲಾರ್ ರಿಪೋರ್ಟ್,- ಇವುಗಳಲ್ಲಿ ಈ ಜಿಲ್ಲೆಗಳು ಹೈದ್ರಾಬಾದ್‌ಗೆ ಹೋಗಬೇಕೆಂದು ರೆಕಮಂಡೇಷನ್ ಮಾಡಿದ್ದರು. ಆ ಸಂದರ್ಭದಲ್ಲಿ ಓಲ್ಡ್

ಮೈಸೂರಿನ ಜನರು ಬಂದು ಅಗ್ರಿಮೆಂಟ್ ಮಾಡಿ, ಕಂಡೀಷನ್‌ಗಳನ್ನು ಹಾಕಿ, ಈ ಭಾಗಗಳಿಗೆ ಎಲ್ಲಾ ರೀತಿಯ ಸೌಲಭ್ಯಗಳನ್ನು ಕೊಡುತ್ತೇವೆ ಎಂದು ಹೇಳಿ ಆ ಪ್ರದೇಶಗಳನ್ನು ಕರ್ನಾಟಕಕ್ಕೆ ತೆಗೆದುಕೊಂಡಿದ್ದರು. ಆದುದರಿಂದ ಹೇಳಿದ ಹಾಗೆ ನಮ್ಮ ಭಾಗಕ್ಕೆ ಅಷ್ಟಾಗಿ ಆದ್ಯತೆಯು ದೊರೆಯುತ್ತಾ ಇಲ್ಲ. ನಮ್ಮ ಭಾಗಕ್ಕೆ ಎಜ್ಯುಕೇಷನ್ ವಿಚಾರದಲ್ಲಾಗಲೀ, ಇರಿಗೇಷನ್ ವಿಚಾರದಲ್ಲಾಗಲೀ, ಯಾವುದೇ ವಿಚಾರದಲ್ಲಿಯೂ ಕೂಡ ಹೆಚ್ಚಿನ ಸವಲತ್ತುಗಳನ್ನು ಕೊಟ್ಟು ಅಭಿವೃದ್ಧಿಗೆ ದಾರಿ ಮಾಡಿಕೊಡಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ. ಮಾನ್ಯ ಇರಿಗೇಷನ್ ಸಚಿವರಾದ ಮಾನ್ಯ ನಾಗೇಗೌಡರು ಬೀದರ್‌ಗೆ ಬಂದಾಗ ಒಂದು ಸ್ಟೇಟ್‌ಮೆಂಟ್ ಕೊಟ್ಟಿದ್ದರು. 2002ನೇ ಇಸವಿಯೊಳಗಾಗಿ ಕಾರಂಜಾ ಪ್ರಾಜೆಕ್ಟ್‌ನ್ನು ಮುಗಿಸಿಕೊಡುತ್ತೇವೆ ಎಂದು ಹೇಳಿದ್ದಾರೆ. ಆದರೆ ಈ ಪ್ರಾಜೆಕ್ಟ್‌ನ ಬಗ್ಗೆ ಬಜೆಟ್‌ನಲ್ಲಿ ಎಲ್ಲಿಯೂ ಪ್ರಸ್ತಾಪವೇ ಇಲ್ಲ. ನಮ್ಮ ಜಿಲ್ಲೆಯಲ್ಲಿ ಇರುವುದು ಕೇವಲ ಕಾರಂಜಾ ಮತ್ತು ಬೀದರ್ ಸಹಕಾರಿ ಸಕ್ಕರೆ ಕಾರ್ಖಾನೆ- ಮಾತ್ರ. ನಮ್ಮ ಸಕ್ಕರೆ ಕಾರ್ಖಾನೆಯ ಗತಿ ಏನಾಗಿದೆ ಎಂಬುದು ನಿಮಗೆ ಗೊತ್ತಿದೆ. ಆದರೆ ಕಾರಂಜಾ ಪ್ರಾಜೆಕ್ಟ್‌ನ ಬಗ್ಗೆ ಹಣವನ್ನು ಮಿಾಸಲಿಟ್ಟು ನಮ್ಮ ಭಾಗಕ್ಕೆ ಉಪಕಾರ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ತಮ್ಮ ಉತ್ತರದಲ್ಲಿ ಕಾರಂಜ ಪ್ರಾಜೆಕ್ಟ್‌ಗೆ ಎಷ್ಟು ಹಣವನ್ನು ಇಡುತ್ತೀರಿ ಎಂಬುದನ್ನು ಆನೌನ್ಸ್ ಮಾಡಬೇಕೆಂದು ಅರಿಕೆ ಮಾಡಿಕೊಳ್ಳುತ್ತೇನೆ.

ಮಾನ್ಯ ಅಧ್ಯಕ್ಷರೇ, ಬಜೆಟ್‌ನಲ್ಲಿ ಹಿಂದುಳಿದ ವರ್ಗಗಳವರಿಗೆ ಮತ್ತು ಅಲ್ಪಸಂಖ್ಯಾತರಿಗೆ ಹಾಸ್ಟೆಲ್ ಸೌಲಭ್ಯಗಳ ಕುರಿತು ವಿವರ ಕೊಟ್ಟಿದ್ದೀರಿ. ರಾಜ್ಯದಲ್ಲಿ ಹಿಂದುಳಿದ ಮತ್ತು ಅಲ್ಪಸಂಖ್ಯಾತರ ಜನಸಂಖ್ಯೆಯು 50 ರಿಂದ 60 ಪರ್‌ಸೆಂಟ್‌ಗಳಷ್ಟು ಇದೆ. ನಮ್ಮ ಜಿಲ್ಲೆಯಲ್ಲಿ 10 ರಿಂದ 12 ಹಾಸ್ಟೆಲ್‌ಗಳು ಇವೆ. ಇವುಗಳು ಪ್ರೀಮೆಟ್ರಿಕ್ ಹಾಸ್ಟೆಲ್‌ಗಳಾಗಿದ್ದು ಡಿಗ್ರಿ ಕಾಲೇಜ್ ಸ್ಟೂಡೆಂಟ್ಸ್‌ಗೆ ಹಾಸ್ಟೆಲ್ ಸೌಲಭ್ಯವೇ ಇಲ್ಲ. ಆದ್ದರಿಂದ ನಮ್ಮ ಜಿಲ್ಲೆಗೆ ಹಾಗೂ ಇತರ ಜಿಲ್ಲೆಗಳಿಗೂ ಕೂಡ ಬ್ಯಾಕ್‌ವರ್ಡ್‌ಕ್ಲಾಸ್ ಮತ್ತು ಮೈನಾರಿಟಿ ವಿದ್ಯಾರ್ಥಿಗಳಿಗೆ ಪ್ರೀಮೆಟ್ರಿಕ್ ಮತ್ತು ಪೋಸ್ಟ್‌ಮೆಟ್ರಿಕ್ ಹಾಸ್ಟೆಲ್‌ಗಳನ್ನು ಮಾಡಿಕೊಟ್ಟು ಅವರಿಗೆ ವಿದ್ಯಾಭ್ಯಾಸ ಮಾಡಲು ಅನುಕೂಲ ಮಾಡಿಕೊಡಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ. ಹಾಗೆಯೇ ಅಲ್ಪಸಂಖ್ಯಾತರಿಗೆ ಈ ಸಾಲಿನಲ್ಲಿ ನಾಲ್ಕು ವಸತಿ ಶಾಲೆಗಳನ್ನು ಕೊಡುತ್ತೇವೆಂದು ಆನೌನ್ಸ್ ಮಾಡಿದ್ದೀರಿ. ಇಲ್ಲಿ ಕೂಡ ನಮಗೆ ಅನ್ಯಾಯವಾಗಿದೆ. ಐದು ವರ್ಷಗಳಲ್ಲಿ ನಮಗೆ 25 ವಸತಿಶಾಲೆಗಳು ಬರಬೇಕಾಗಿತ್ತು. ಮಾನ್ಯ ದೇವೇಗೌಡರು ಇರುವಾಗ ಐದು ವಸತಿ ಶಾಲೆಗಳನ್ನು ಕೊಟ್ಟಿದ್ದರು ಅವುಗಳು ನಡೆಯುತ್ತಾ ಇವೆ. ಈ ವರ್ಷದಲ್ಲಿ ಆದಕ್ಕೂ ಕೂಡ ಅಡ್ಮಿಷನ್ ನಡೆದಿಲ್ಲ. ಆ ಕುರಿತು ಏನು ಗೊಂದಲವಿದೆ ಎನ್ನುವುದು ತಮಗೆ ಗೊತ್ತು. ಈ ಕುರಿತು ಯಾರು ತಪ್ಪು ಮಾಡಿದ್ದಾರೋ ಅವರಿಗೆ ಶಿಕ್ಷೆ ಕೊಡಿ. ಯಾವ ಮಂತ್ರಿ ಆ ಕುರಿತು ತಪ್ಪು ಮಾಡಿದ್ದಾರೋ ಅವರನ್ನು ಪಾರ್ಟಿಯಿಂದ ಹೊರಗೆ ಹಾಕಿ. ಯಾರೋ ಮಾಡಿದ ತಪ್ಪಿಗೆ ಇಡೀ ಸಮಾಜಕ್ಕೆ ಯಾಕೆ ಶಿಕ್ಷೆ ಕೊಡುತ್ತಿದ್ದೀರಿ? ತಾವುಗಳು ಘೋಷಣೆ ಮಾಡಿದ ಪ್ರಕಾರ ವರ್ಷಕ್ಕೆ ಐದು ವಸತಿ ಶಾಲೆಗಳಂತೆ ನಮಗೆ 25

ಶಾಲೆಗಳನ್ನು ಕೊಡಬೇಕಾಗುತ್ತದೆ. ಇದೇನೂ ದೊಡ್ಡ ಮಾತಲ್ಲ. ನಮ್ಮ ಜನಸಂಖ್ಯೆಯು 12 ರಿಂದ 15 ಪರ್‌ಸೆಂಟ್‌ಗಳಷ್ಟು ಇದೆ. ನಮಗೆ 25 ವಸತಿ ಶಾಲೆಗಳನ್ನು ಕೊಟ್ಟರೆ ಸರಕಾರದ ಮೇಲೆ ದೊಡ್ಡದಾದ ಭಾರ ಬೀಳುವುದಿಲ್ಲ. ಅದನ್ನು ತಾವುಗಳು ಅನೌನ್ಸ್ ಮಾಡಬೇಕೆಂದು ಕೇಳುಕೊಳ್ಳುತ್ತೇನೆ. ತಮ್ಮ ಬಜೆಟ್‌ನಲ್ಲಿ ಮೈನಾರಿಟಿ ಕಮಿಷನ್‌ರವರ ರೆಕಮಂಡೇಷನ್ ಬಗ್ಗೆ ಹೇಳಿದ್ದಕ್ಕೆ ಅಭಿನಂದಿಸುತ್ತೇನೆ. ಆದರೆ ಕಮಿಟಿ ರೆಕಮಂಡೇಷನ್‌ಗಳ ಮೇಲೆ ತಮ್ಮ ಯೋಜನೆ ಏನಿದೆ? ಅದಕ್ಕಾಗಿ ಬಜೆಟ್ ಎಷ್ಟು ಇದೆ? ಅದಕ್ಕಾಗಿ ಬಜೆಟ್ ರಿಸರ್ವ್ ಮಾಡಿದ್ದೀರಾ? ಎಂಬುದನ್ನು ಹೇಳಬೇಕು. ಮಾನ್ಯ ಅಧ್ಯಕ್ಷರೇ, ನನ್ನ ಒಂದು ಸಲಹೆ ಇದೆ. ತಾವುಗಳು ಅಲ್ಪಸಂಖ್ಯಾತರಿಗೆ ರೆಸಿಡೆನ್ಷಿಯಲ್ ಸ್ಕೂಲ್‌ಗಳನ್ನು ಕೊಡುತ್ತಾ ಇದ್ದೀರಿ. ಕೋಟ್ಯಾಂತರ ರೂಪಾಯಿಗಳು ಮೌಲಾನ ಅಬ್ದುಲ್ ಕಲಾಂ ಆಜಾದ್ ಫೌಂಡೇಷನ್‌ನಲ್ಲಿ ಇದೆ. ಇಲ್ಲಿಂದ ಬೇರೆ ರಾಜ್ಯಗಳವರು ಕೋಟ್ಯಾಂತರ ರೂಪಾಯಿಗಳನ್ನು ಯೋಜನೆಗಾಗಿ ಒಯ್ಯುತ್ತಿದ್ದಾರೆ. ಆಂಧ್ರಪ್ರದೇಶ, ಕೇರಳ ರಾಜ್ಯದವರು ಸಾಕಷ್ಟು ಹಣವನ್ನು ಫೌಂಡೇಷನ್‌ನಿಂದ ಉಪಯೋಗ ಮಾಡಿಕೊಂಡಿದ್ದಾರೆ. ಸರಕಾರದಿಂದ ಒಂದು ಮನವಿಯನ್ನು ಕೊಟ್ಟಿದ್ದರೂ ಕೂಡ ಅದನ್ನು ಪಡೆದುಕೊಳ್ಳಬಹುದಾಗಿತ್ತು. ಕೇಂದ್ರ ಸರಕಾರದವರು ಈ ಹಣವನ್ನು ಕೊಡುವುದಕ್ಕೆ ತಯಾರಾಗಿದ್ದಾರೆ. ಈಗಲಾದರೂ ಆ ಫೌಂಡೇಷನ್‌ನಿಂದ ಹಣವನ್ನು ತಂದು ಕರ್ನಾಟಕ ರಾಜ್ಯದಲ್ಲಿನ ಅಲ್ಪಸಂಖ್ಯಾತರ ಮಕ್ಕಳ ಶಿಕ್ಷಣಕ್ಕಾಗಿ ಉಪಯೋಗ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

5.50 ಪಿ.ಎಂ.

ಅಧ್ಯಕ್ಷರು :— ಅರಬ್ಬೀ ಮದರಸಗಳದ್ದು ಹೇಳ್ರಿ.

ಶ್ರೀ ಸೈಯದ್ ಜುಲ್ಫೀಕರ್ ಹಶ್ಮಿ:— ಮದರಸಗಳ ಆಧುನೀಕರಣ ಎಂಬ ಕೇಂದ್ರ ಸರ್ಕಾರದ ಯೋಜನೆ ಇದೆ. ಬಿಹಾರದಲ್ಲಿ ಯುಪಿಯಲ್ಲಿ ಕೋಟ್ಯಂತರ ದುಡ್ಡು ಒಯ್ಯುತ್ತಿದ್ದಾರೆ. ಆದರೆ ಕೇಂದ್ರ ಸರ್ಕಾರದ ಹಣ ಕರ್ನಾಟಕದಲ್ಲಿ ಲ್ಯಾಪ್ಸಾಗುತ್ತಿದೆ. ನಮ್ಮ ಅಧಿಕಾರಿಗಳು ಕೆಲಸ ಮಾಡುತ್ತಿಲ್ಲ. ಪ್ರಪೋಸಲ್‌ಗಳನ್ನು ಇನ್ ಟೈಂ ಕೇಂದ್ರಕ್ಕೆ ಕಳುಹಿಸುತ್ತಿಲ್ಲ. ನಿಮ್ಮ ವಿಪಿ ಸಿಂಗರು ಪ್ರಧಾನಿಗಳಾಗಿದ್ದಾಗ ಪ್ರಕಟಿಸಿದ ಯೋಜನೆ ಇದು. ನೀವು ವಿಪಿ ಸಿಂಗರ ಹೆಸರಿನ ಮೇಲೆ ಅಲ್ಪಸಂಖ್ಯಾತರು ನಿಮಗೆ ಮತ್ತೆ ವೋಟ್ ಕೊಡಬಹುದು. ಆ ಯೋಜನೆಯ ನೆನಪೇ ನಿಮಗಿಲ್ಲ, ಒಂದು ಟೈಂ ರಿವ್ಯೂ ಮಾಡುವುದಕ್ಕೆ ರೆಡಿ ಇಲ್ಲ. ಉರ್ದು ಮತ್ತು ಇತರ ಅಲ್ಪಸಂಖ್ಯಾತ ಭಾಷೆಗಳ ಡೈರೆಕ್ಟರೇಟ್ ಇದೆ, ಆಫೀಸು ಎಲ್ಲಾ ವ್ಯವಸ್ಥೆ ಇದೆ. ಆದರೆ ರೆಗ್ಯುಲರ್ ಡೈರೆಕ್ಟರ್ ಯಾರೂ ಇಲ್ಲ, ಎಲ್ಲಾ ಇನ್‌ಚಾರ್ಜ್, ಒಂದು ವರ್ಷದಿಂದ ಅಲ್ಲಿ ಕೆಲಸ ಮಾಡುವುದಕ್ಕೆ ರೆಡೀನೇ ಇಲ್ಲ. ಒಂದು ಸಲವೂ ಯಾವುದೇ ಜಿಲ್ಲೆಗೂ ಭೇಟಿ ನೀಡುತ್ತಿಲ್ಲ. ಆ ಕಾರಣದಿಂದ ಆ ಯೋಜನೆಯೇ ಲ್ಯಾಪ್ಸಾಗುತ್ತಿದೆ. ತಾವು ಪರ್ಸನಲ್ ಇಂಟರೆಸ್ಟ್ ತೆಗೆದುಕೊಂಡು ಅರಬ್ಬಿ ಮದರಸ ಸಂಸ್ಥೆಗಳ ಬಗ್ಗೆ ಕೇಂದ್ರದಲ್ಲಿ ಇರುವ ಯೋಜನೆಗೆ ಒಂದು ಅರ್ಜಿ ಕೊಡಿರಿ, ತಾವು

ಇದನ್ನು ಮಾಡುತ್ತೀರಿ ಅಂತ ನನ್ನ ವಿನಂತಿ ಇದೆ. ತಾವು ಉಪಮುಖ್ಯಮಂತ್ರಿಗಳಾಗಿದ್ದೀರಿ, ಒಂದು ಸಲ ಮೇಂಟೇನ್ ಮಾಡಲು ನೀವು ರೆಡಿ ಇಲ್ಲ, ನೀವು ಹೊಸದು ಕೊಡುವುದು ಏನೂ ಬೇಡ ಕೇಂದ್ರದ್ದೇನಿದೆಯೋ ಅದು ಕೊಡಿಸಿಬಿಡಿ. ನಿಮ್ಮ ಅಧಿಕಾರಿಗಳಿಗೆ ನೀವು ಆದೇಶ ಕೊಡಿ ನೋಡಿ ಈ ಟೈಮಿನಲ್ಲಿ ಇದು ಇಂಪ್ಲಿಮೆಂಟ್ ಆಗಬೇಕು. ಈ ತಿಂಗಳಲ್ಲಿ ಇದಕ್ಕೆ ಪ್ರಪೋಸಲ್ ಬರಬೇಕು ಎಂದು.

ಅಧ್ಯಕ್ಷರು :— ಗ್ರಾಂಟ್ ಇನ್ ಏಡ್ ಕೋಡ್‌ದು ಹೇಳಿ.

ಶ್ರೀ ಸೈಯದ್ ಜುಲ್ಫೀಕರ್ ಹಶ್ಮಿ:— ತಾವು ಬಂದ ಮೇಲೆ ಆರಬ್ಬೀ ಶಾಲೆಗಳಿಗೆ ಗ್ರಾಂಟನ್ನು ನಿಲ್ಲಿಸಿಬಿಟ್ಟಿದ್ದೀರಿ. ಅದರಲ್ಲೇನು ಮೋಜ ಇದೆ ಅದರೊಳಗೆ, ಎಷ್ಟು ಹಣ ಅದಕ್ಕಾಗಿ ಕೊಟ್ಟುಬಿಡುತ್ತಿದ್ದಿರಿ? 1982 ರಲ್ಲಿ ಎಲ್ಲಾ ಅರಬ್ಬಿ ಶಾಲೆಗಳಿಗೆ ಪರ್ಮಿಷನ್ ಸಿಕ್ಕಿದೆ. 50 ಪರ್ಸೆಂಟ್ ಅರಬೀ ಶಾಲೆಗಳಿಗೆ ಗ್ರಾಂಟ್ ಸಿಕ್ಕುತ್ತಿದೆ. ಇನ್ನು 50 ಪರ್ಸೆಂಟ್‌ಗೆ ಸಿಕ್ಕುತ್ತಿಲ್ಲ. ತಾವು ಬಂದ ಮೇಲೆ ಗ್ರಾಂಟ್ ನಿಲ್ಲಿಸಿಬಿಟ್ಟಿದ್ದೀರಿ ನಮಗೆ ಬಹಳ ನೋವು ಬರುತ್ತಿದೆ. ನಾವು ಜನರಿಗೆ ಸಿದ್ಧರಾಮಯ್ಯನವರು ಅಲ್ಪಸಂಖ್ಯಾತರ ಅಭಿವೃದ್ಧಿಗೆಂದು ಏನೆಲ್ಲಾ ಮಾಡುತ್ತಿದ್ದಾರೆ ಎಂದು ಹೇಳುತ್ತೇವೆ, ಆದರೆ ನೀವು ಕೊಡುತ್ತಿದ್ದುದನ್ನೂ ನಿಲ್ಲಿಸಿ ಬಿಟ್ಟಿದ್ದೀರಿ. ಈ ಟೈಮಿನಲ್ಲಾದರೂ ತಾವು ಆ ಬ್ಯಾನನ್ನು ಲಿಫ್ಟ್ ಮಾಡಿ, ಮಾನ್ಯ ಅಧ್ಯಕ್ಷರೂ ಹೇಳುತ್ತಿದ್ದಾರೆ. ಅವರ ಮಾತಾದರೂ ಕೇಳಿ. ಅರಬ್ಬಿ ಶಾಲೆಗಳ ಮೌಲ್ವಿಗಳು ನೋವಿನಲ್ಲಿದ್ದಾರೆ. ನನಗೂ ಹೇಳಿ ಹೇಳಿ ಸಾಕಾಗಿ, ಒಂದು ಸಲ ಸಭಾಧ್ಯಕ್ಷರು ಮಿಾಟಿಂಗ್ ಕರೆದಿದ್ದಾರೆ, ಸಿದ್ಧರಾಮಯ್ಯನವರು ಮೀಟಿಂಗ್ ಕರೆದಿದ್ದರು ಆ ಟೈಮಿನಲ್ಲಿ ನಿಮಗೆ ಗ್ರಾಂಟ್ ಸಿಕ್ಕಬಹುದು ಎಂದು ಹೇಳಿಬಿಟ್ಟೆ. ಆ ಜನ ಬಂದು ನನ್ನನ್ನು ಹಿಡಿದುಬಿಟ್ಟರು. ಏನು ಹಶ್ಮಿಯವರೇ, ನೀವು ಹೀಗೆ ಹೇಳಿದಿರಿ, 4 ವರ್ಷವಾಗುತ್ತಿದೆ. ನಮಗೆ ಗ್ರಾಂಟ್ ಸಿಕ್ಕುತ್ತಿಲ್ಲ, ನಾವು ಹೇಗೆ ಬಾಳಬೇಕು. ಬಿಹಾರ ಯುಪಿಯಲ್ಲಿ ಅಲ್ಲಿಂದ ಬಂದು ಶಿಕ್ಷಣ ಕೊಡುತ್ತದ್ದೇವೆ ಇಲ್ಲಿ ಅಂದರು. ನಾನು ಏನು ಮಾಡಿದೆ? ನಾನು ನೀವೇ ನಮ್ಮ ರಕ್ಷಣೆಗೆ ಬರಬೇಕು, ಏನಾದರೂ ಮಾಡಿರಿ ಸಾರ್ ಎಂದು ಅಧ್ಯಕ್ಷರ ಬಳಿ ನಿನ್ನೆ ಅವರನ್ನೆಲ್ಲಾ ಕರೆದುಕೊಂಡು ಬಂದು ಭೇಟಿ ಮಾಡಿಸಿದೆ. ತಾವು ಏನಾದರೂ ಹೇಳಿ, ನನಗೂ ಹೇಳಿ ಸಾಕಾಗಿದೆ, ನಾಲ್ಕು ದಿನದಿಂದ ನಮ್ಮ ರೂಮಿನಲ್ಲಿದ್ದಾರೆ ಇವರು, ಸಾಹೇಬರು ಅವರ ಜೊತೆ ಮಾತನಾಡಿ ಏನಾದರೂ ಮಾಡೋಣ ಎಂದು ಹೇಳಿದರು. ಈ ಟೈಮಿನಲ್ಲಿ ಅರಬ್ಬೀ ಶಾಲೆಗಳಿಗೆ ಗ್ರಾಂಟ್ ಪ್ರಕಟಿಸುತ್ತೀರಿ ಎಂದು ನಮಗೆ ನಿಮ್ಮ ಮೇಲೆ ಬಹಳ ವಿಶ್ವಾಸ ಇದೆ. ಈಗಲಾದರೂ ಅನೌನ್ಸ್ ಮಾಡಬೇಕು, ಇಷ್ಟು ಸ್ಪೀಚ್ ನಾನು ಮಾಡಿತ್ತಿದ್ದೇನೆ. ನಿಮ್ಮ ಮೇಲೆ ನಾನು ಟೀಕೆ ಟಿಪ್ಪಣಿ ಮಾಡುತ್ತಿಲ್ಲ, ನಾನು ಕೊಡುತ್ತಿರುವ ಈ ಸಲಹೆಗಳನ್ನು ಗಮನದಲ್ಲಿಟ್ಟುಕೊಳ್ಳಿ. ಈ ಮೌಲ್ವಿ ಜನ ನಿಮ್ಮ 1994ರ ಚುನಾವಣೆಯಲ್ಲಿ ನಿಮ್ಮ ಪಾರ್ಟಿ ಕೇಳಿಲ್ಲ, ನಿಮ್ಮ ಜೀಪ್ ಕೇಳಿಲ್ಲ, ನಿಮ್ಮ ದುಡ್ಡು ಕೇಳಿಲ್ಲ, ನಿಮ್ಮ ಪಾರ್ಟಿಯಲ್ಲಿ ಅಲ್ಪಸಂಖ್ಯಾತರ ಲೀಡರ್ ಇಲ್ಲ, ಯಾರು ಹೇಳಿದರೂ ಮುಸಲ್ಮಾನರು

ನಿಮಗೆ ವೋಟ್ ಹಾಕಲಿಲ್ಲ. ಈ ಜನವೇ ಕಾಂಗ್ರೆಸ್‌ಗೆ ವಿರುದ್ಧವಾಗಿ ನಿಮಗೆ ಪ್ರಚಾರ ಮಾಡಿ ವೋಟ್ ಹಾಕಿದ್ದಾರೆ. ನಿಮಗೆ ಅಧಿಕಾರವೂ ಸಿಕ್ಕಿತು, ಅದರ ಸಲುವಾಗಿ ಅವರ ಪರವಾಗಿ ತಾವು ಗಮನಹರಿಸುತ್ತೀರಿ ಎಂಬ ವಿಶ್ವಾಸ ನನಗೆ ಇದೆ. ಗ್ರಾಂಟ್ ಇನ್ ಏಡ್ ವ್ಯಾಪ್ತಿಯೊಳಕ್ಕೆ ಅರಬ್ಬೀ ಶಾಲೆಗಳನ್ನೂ ತೆಗೆದುಕೊಳ್ಳಬಹುದು.

ಅಧ್ಯಕ್ಷರು :— ಒಂದ್ನಿಮಿಷ ಇರಪ್ಪ ; ಸಿದ್ಧರಾಮಯ್ಯನವರೇ, ದೇವರಾಜ ಅರಸರು ಮುಖ್ಯಮಂತ್ರಿಗಳಾಗಿದ್ದಾಗ ಈ ಅರಬೀ ಮದರಸಗಳನ್ನು ಗ್ರಾಂಟ್ ಇನ್ ಏಡ್ ಕೋಡ್ ಒಳಗೆ ತಂದಿದ್ದರು. ಏನು ಕಾರಣವೋ ಏನೋ 1992ರಲ್ಲಿ ಇವನ್ನು ರಿಮೂವ್ ಮಾಡಿಬಿಟ್ಟರು. ಮದರಸಗಳು ಅಂದರೆ ಸಣ್ಣ ಮಕ್ಕಳಿಗೆ ನೀತಿಬೋಧೆ ಮಾಡುವ ಶಾಲೆಗಳು, ಅವರು ತಪ್ಪುದಾರಿಗೆ ಹೋಗದಂತೆ ಮಾಡುವುದು. ಅದರ ಟೀಚರ್‌ಗಳು ಯುಪಿ, ಬಿಹಾರ್ ಕಡೆಯಿಂದ ರಮ್‌ಜಾನ್ ಟೈಮಿನಲ್ಲಿ ತರಾಬಿ ಅಂತ ಓದಿಸುವುದಕ್ಕೆ ಬರುತ್ತಾರಲ್ಲಾ, ಅವರೇ ಮಾಡುವುದು. ನಮ್ಮ ಜನರಿಗೆ ಅದು ಬರುವುದಿಲ್ಲ. ಅವರಿಗೆ ಕಡುಬಡತನ ಇರುತ್ತದೆ. ಇವರು ಒಂದು ತಿಂಗಳೋ ಎರಡು ತಿಂಗಳೋ ಚುದಾ ಹಾಕಿ ಅವರನ್ನಿಟ್ಟುಕೊಳ್ಳುತ್ತಾರೆ, ಆಮೇಲೆ ಇವರು ಚುಂದಾ ಕೊಡುವುದಿಲ್ಲ, ಹೊರಟುಹೋಗಿಬಿಡುತ್ತಾರೆ, ಸ್ಕೂಲ್‌ಗಳು ಹಾಗೆ ನಿಂತುಹೋಗಿಬಿಡುತ್ತವೆ. ನಾನೂ ಒಂದ್ಸಲ ಕರೆಸಿ ಕೇಳಿದೆ, 92ರಿಂದ ಏಕೆ ನಿಲ್ಲಿಸಿದರು ಎಂದು ಅವರಿಗೂ ಗೊತ್ತಿಲ್ಲ, ಅಂಥಾ ದೊಡ್ಡ ವಿರ್ಚೇನೂ ಬರುವುದಿಲ್ಲ. ಇದರ ಜೊತೆಗೆ ಆ ಬ್ಲೈಂಡ್ ಸ್ಕೂಲ್ಸ್ ಬಹಳ ಅಂದರೆ ರಾಜ್ಯದಲ್ಲೆಲ್ಲಾ 5-10 ಇರಬಹುದು, ಇವನ್ನೂ ವಾಪಸ್ಸ್ ಗ್ರಾಂಟ್ ಇನ್ ಏಡ್ ಕೋಡ್‌ಗೆ ತೆಗೆದುಕೊಳ್ಳಿ.

ಶ್ರೀ ಸೈಯದ್ ಜುಲ್ಫಿಕರ್ ಹಶ್ಮಿ:— ಮೈನಾರಿಟಿ ವೆಲ್‌ಫೇರ್ ಡೈರೆಕ್ಟರೇಟ್-ಹೋದ ವರ್ಷ ಬಜೆಟ್‌ನಲ್ಲಿ ಇದನ್ನು ಅನೌನ್ಸ್ ಮಾಡಿದ್ದು, ಅಲ್ಲಿಗೆ ಡೈರೆಕ್ಟರನ್ನು ಯಾರಿಗೆ ನೇಮಕ ಮಾಡಿದಿರಿ, ಅವರು ಏಕೆ ಬಂದು ಜಾಯಿನ್ ಆಗಿಲ್ಲ? ಅದರ ಕಚೇರಿ ಎಲ್ಲಿದೆ? ನಮಗೆ ಗೊತ್ತಿಲ್ಲ. ಒಂದು ವರ್ಷವಾದರೂ ಆ ಆಫೀಸ್ ಕೆಲಸ ಮಾಡುತ್ತಿಲ್ಲ. ಅನೌನ್ಸ್ ಮಾಡಿದ್ದಿರಿ, ಮತ್ತೆ ಈವಾಗ ರಿಪೀಟ್ ಮಾಡಿದಿರಿ, ಈ ವರ್ಷ ಕೂಡಲೇ ಯಾರಾದರೂ ಡೈರೆಕ್ಟರನ್ನು ಪೋಸ್ಟಿಂಗ್ಸ್ ಮಾಡಿ ಅವರಿಗೆ ಸ್ವಲ್ಪ ಹೆಚ್ಚು ಅಧಿಕಾರ ಕೊಡುವುದನ್ನು ತಾವು ಪರಿಶೀಲನೆ ಮಾಡಿ. ಯಾರೂ ಬಂದು ಕೆಲಸ ಮಾಡಲು ರೆಡಿ ಇಲ್ಲ ಸಾರ್, ಯಾರಿಗೆ ತಾವು ಪೋಸ್ಟಿಂಗ್ಸ್ ಕೊಟ್ಟಿರಿ, ಅವರು ಯಾಕೆ ಬಂದು ಜಾಯಿನ್ ಆಗಿಲ್ಲ ಕೇಳಿ ಮತ್ತೆ. ಅವರು ಬಂದರೆ ಸ್ವಲ್ಪ ಕೆಲಸವಾಗುತ್ತದೆ. ಕೂಡಲೇ ತಾವು ಪೋಸ್ಟಿಂಗ್ ಮಾಡುತ್ತೀರಿ ಎನ್ನುವ ಆಶಯ ನಮಗಿದೆ. ಈ ವರ್ಷ ಬೀದರ್ ಜಿಲ್ಲೆಯಲ್ಲಿ ಇಂದಿರಾಗಾಂಧಿಯವರ 20 ಅಂಶಗಳ ಕಾರ್ಯಕ್ರಮದ ಬಗ್ಗೆ ಒಂದೂ ಮೀಟಿಂಗ್ ಆಗಿಲ್ಲ. ಹಿಂದಿನ ವರ್ಷ ಜಿಲ್ಲಾ ಸಚಿವರು ಅದಕ್ಕೆ ಚೇರ್ಮನ್ನಿದ್ದರು, ಈ ವರ್ಷ ಜಿಲ್ಲಾಧಿಕಾರಿಗಳನ್ನು ಚೇರ್ಮನ್ ಮಾಡಿದ್ದೀರಿ. ಒಂದು ಸಲವೂ ರಿವ್ಯೂ ಮಾಡಿಲ್ಲ. ಮತ್ತೆ ಸಾಕಷ್ಟು ಇಲಾಖೆಗಳಲ್ಲಿ ರೋಸ್ಟರ್ ಫಾಲೋ ಆಗುತ್ತಿಲ್ಲ. ತಾರು ಹೇಳುತ್ತೀರಿ, ಎಲ್ಲಾ ವಿಭಾಗದಲ್ಲಿ ಅಲ್ಪಸಂಖ್ಯಾತರನ್ನು

ನಾವು ಅಭಿವೃದ್ಧಿಪಡಿಸಬಹುದು ಎಂದು. ಒಂದು ಸಲ ಇಲಾಖಾವಾರು ತಾವು ರಿವ್ಯೂ ಮಾಡಿ, ಅಲ್ಪಸಂಖ್ಯಾತರಿಗೆ ಏನೇನು ಮಾಡುತ್ತಿದ್ದಾರೆ ಅಧಿಕಾರಿಗಳು ಎಂದು ಕೇಳುವವರಿಲ್ಲ. ಒಂದು ಕಡೆ ನೀವು ಮೈನಾರಿಟಿ ಅಭಿವೃದ್ಧಿ ನಿಗಮದಲ್ಲಿ ಪ್ರಕಟಿಸುತ್ತೀರಿ, ಇಷ್ಟು ಕೋಟಿ ಕೊಡುತ್ತೇವೆ ಎಂದು. ಆದರೆ ಎರಡು ವರ್ಷದಿಂದ ಅವರು ಲೋನ್ ರಿಲೀಸ್ ಮಾಡಿಲ್ಲ. ನೀವು ಮಾರ್ಜಿನ್‌ಮನಿ ಸಾಲ ಕೊಟ್ಟರೂ ಅವರು ಅನೌನ್ಸ್ ಮಾಡಿಲ್ಲ. ಈ ನಿಗಮದ ಮಾರ್ಜಿನ್‌ಮನಿಯನ್ನು ಯಾವುದೋ ಸಹಕಾರಿ ಬ್ಯಾಂಕ್ ದಾವಣಗೆರೆಯಲ್ಲಿ ಠೇವಣಿ ಮಾಡಿಬಿಟ್ಟಿದ್ದಾರೆ. ಆ ಬ್ಯಾಂಕ್‌ನಲ್ಲಿ ದುಡ್ಡಿಲ್ಲ, ರಿಲೀಸ್ ಮಾಡುತ್ತಿಲ್ಲ. ನಮ್ಮ ಜನ ನಿಗಮದ ಕಚೇರಿಗೆ ಬರುವುದು ಹೋಗುವುದು ಅವರು ನಾಳೆ ಬಾ ನಾಡಿದ್ದು ಬಾ ಒಂದು ವೀಕಾಗಲಿ, ಒಂದು ಮಂಥಾಗಲಿ ಮಾರ್ಚ್ ಆಗಲಿ ಏಪ್ರಿಲ್ ಆಗಲಿ ಅನ್ನುತ್ತಿದ್ದಾರೆ. ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮ ಹೋಗಿ ಅಲ್ಪಸಂಖ್ಯಾತರ ಹೆರಾಸ್‌ಮೆಂಟ್ ನಿಗಮ ಆಗಿಬಿಟ್ಟಿದೆ. ಇಂಥ ತಿಂಗಳಲ್ಲಿ ಅರ್ಜಿಗಳನ್ನು ಪಡೆಯಬೇಕು, ಈ ಟೈಮಲ್ಲಿ ಮಾರ್ಜಿನ್‌ಮನಿ ರಿಲೀಸಾಗಬೇಕು, ಈ ತಿಂಗಳಲ್ಲಿ ಸಾಲ ರಿಲೀಸಾಗಬೇಕು ಎಂದು ನೀವು ಕಂಡಿಷನ್ ಹಾಕಿಬಿಡಿ. ಈ ನಿಗಮದ್ದು ಮತ್ತು ಎಸ್‌ಸಿ : ಎಸ್‌ಟಿ ಅಭಿವೃದ್ಧಿ ನಿಗಮದ ಅರ್ಜಿಗಳನ್ನು ನೋಡಿದ ಕೂಡಲೇ ಬ್ಯಾಂಕಿನವರು ಅವನ್ನು ಹೊರಗೆ ಹಾಕಿಬಿಡುತ್ತಾರೆ. ಕೇಳುವುದಕ್ಕೇ ರೆಡಿ ಇಲ್ಲ. ಅದರ ಸಲುವಾಗಿ ಒಂದು ಸಲ ಅವರನ್ನು ಮೀಟಿಂಗ್ ಕರೆಸಿ ಸೂಚನೆ ಕೊಟ್ಟುಬಿಡಿ ಕೂಡಲೇ ಎಲ್ಲಾ ಯೋಜನೆಗಳು ಇಂಪ್ಲಿಮೆಂಟಾಗಬೇಕು ಎಂದು. ಅಧ್ಯಕ್ಷರೇ, ಈ ವರ್ಷ ವಕ್ಫ್‌ಗೆ 7 ಕೋಟಿ ಅನೌನ್ಸ್ ಮಾಡಿದ್ದೀರಿ. ವಕ್ಫ್‌ನಲ್ಲೇ ಒಂದು ಟ್ರಿಬ್ಯೂಷನಲ್ ಅಂತಲೂ ಅನೌನ್ಸ್ ಮಾಡಿದ್ದೀರಿ. ಆ ಟ್ರಿಬ್ಯೂನಲ್ ಕೆಲಸ ಮಾಡುವುದಕ್ಕೇ ಈ ದುಡ್ಡು ಸಾಕಾಗುವುದಿಲ್ಲ. ಮತ್ತೆ ಮೆಯಿನ್‌ಟೆನೆನ್ಸ್ ಹೇಗೆ ಆಗಬೇಕು? ನಾಳೆ ವಕ್ಫ್ ಪ್ರಾಪರ್ಟಿಯನ್ನು ಪ್ರೊಟೆಕ್ಷನ್ ಹೇಗೆ ಮಾಡಬೇಕು? ಅದರ ಬಗ್ಗೆ ನಿಮ್ಮ ಟ್ರಿಬ್ಯೂನಲ್ ಏನು ಇದೆ, ಇಮ್ಮೀಡಿಯೇಟ್ ಅದು ಕೆಲಸ ಮಾಡಬೇಕು. ಮತ್ತೆ ರೆವಿನ್ಯೂ ಡಿಪಾರ್ಟ್‌ಮೆಂಟ್ ನವರಿಗೆ ಇನ್ಸ್‌ಟ್ರಕ್ಷನನ್ನು ಕೊಡಿ. ಎಷ್ಟು ವಕ್ಫ್ ಪ್ರಾಪರ್ಟಿಗಳು ಎನ್‌ಕ್ರೋಚ್‌ಮೆಂಟ್ ಆಗಿದೆ, ಸರ್ವೆ ರಿಕಾರ್ಡ್ ನೋಡಿ ಮತ್ತೆ ವಕ್ಫ್ ಡಿಪಾರ್ಟ್‌ಮೆಂಟ್‌ಗೆ ಹ್ಯಾಂಡ್‌ಓವರ್ ಮಾಡಬೇಕು ಎಂದು ಕೇಳುತ್ತೇನೆ. ಗಂಗಾಕಲ್ಯಾಣ ಯೋಜನೆಯ ಬಗ್ಗೆ ತಾವು ಸೆಪರೇಟಾಗಿ ಫಲಾನುಭವಿಗಳಿಗೆ ಕೊಡುತ್ತೇವೆ ಎಂದು ಭರವಸೆ ಕೊಟ್ಟಿದ್ದೀರಿ. ಈ ಟೈಮ್‌ನಲ್ಲಾದರೂ ಮಾಡಿ. ಇದಕ್ಕೆ ಇನ್ನು ಹೆಚ್ಚು ದುಡ್ಡು ಕೊಡುತ್ತೀರಿ ಎಂಬ ಆಶಯವನ್ನು ಇಟ್ಟುಕೊಂಡಿದ್ದೇನೆ. ಹಜ್ ಹೆಸರಿನಲ್ಲಿ ಕರ್ನಾಟಕ ಸರ್ಕಾರಕ್ಕೆ ಬಹಳ ಹೆಸರು ಬರುತ್ತಿದೆ. ಹಜ್‌ಕಮಿಟಿಗೆ ತಾವು ಹಣವನ್ನು ಕೊಡುತ್ತಿಲ್ಲ. ಏನಾದರೂ ಮಾಡಿ ಪ್ರೈವೇಟ್ ಆರ್ಗನೈಜೇಷನ್‌ನಿಂದ ಕೊಡಿಸಬೇಕು. ಇಲ್ಲಿ ಮಂತ್ರಿಗಳು ಅಧ್ಯಕ್ಷರು ಇದ್ದಾರೆ. ಅಲ್ಲಿಂದಾದರೂ ಕಾಂಟ್ರಿಬ್ಯೂಷನ್ ಮಾಡುವಂತಾಗಬೇಕು. ಜನರು ಹಜ್‌ಗೆ ಹೋಗುತ್ತಾರೆ ಎಂದು ಕೊಡುತ್ತಾರೆ. ಇಲ್ಲಿಗೆ ಬಂದಾಗ ಹಜ್ ಜನಾಂಗಕ್ಕೆ ಒಂದು ಹಜ್ ಹೌಸ್ ಇಲ್ಲ. ಆದ್ದರಿಂದ ತಾವು ಹಜ್ ಕಮಿಟಿಗೆ ಸ್ವಲ್ಪ ಹಣವನ್ನು ಕೊಟ್ಟು ಹಜ್ ಹೌಸ್ ಮಾಡುತ್ತೀರಿ ಎಂದು ನಂಬಿದ್ದೇನೆ. ಮತ್ತೆ ಮಾನ್ಯ ಅರ್ಥಸಚಿವರು

ಮೈಸೂರಿನ ಪಕ್ಕದ ಡಿಸ್ಟ್ರಿಕ್ಟ್‌ನವರು. ಟಿಪ್ಪು ಸುಲ್ತಾನ್‌ಗೆ ಸಂಬಂಧಪಟ್ಟಂತೆ 200ನೇ ವರ್ಷದ ಫಂಕ್ಷನ್ ಮಾಡುತ್ತೇವೆ ಎಂದು ಹೇಳಿದ್ದೀರಿ. ಅದರ ಬಗ್ಗೆ ಇನ್ನೂ ಕಾರ್ಯಕ್ರಮವೇ ರೂಪಿತವಾಗಿಲ್ಲ. ಟಿಪ್ಪು ಸುಲ್ತಾನ್ ಒಬ್ಬ ಸ್ವತಂತ್ರ ಸೇನಾನಿ ಎಂದು ಇಡೀ ಕರ್ನಾಟಕದ ಎಲ್ಲಾ ಡಿಸ್ಟ್ರಿಕ್ಟ್‌ನಲ್ಲಿ ಸರ್ಕಾರದ ಮಟ್ಟದಲ್ಲಿ ಫಂಕ್ಷನ್ ಆಗಬೇಕು. ಈ ದೇಶಕ್ಕೆ ಸ್ವಾತಂತ್ರ್ಯದ ಸಲುವಾಗಿ ಟಿಪ್ಪು ಸುಲ್ತಾನ್‌ರವರು ಏನೇನು ಮಾಡಿದ್ದಾರೆ. ಅದರ ಬಗ್ಗೆ ಒಂದು ಪುಸ್ತಕವನ್ನು ಸ್ಥಳೀಯ ಭಾಷೆಯಲ್ಲಿ ಪ್ರಿಂಟ್ ಮಾಡಿಸಿ ಹಂಚಬೇಕು. ನಾನೇನೂ ಟೀಕೆ ಟಿಪ್ಪಣಿ ಮಾಡುವುದಕ್ಕೆ ಹೋಗುವುದಿಲ್ಲ. ಇದು ಕೊನೆಯ ವರ್ಷ. ತಾವೂ ಕೂಡ ಚುನಾವಣೆಗೆ ಹೋಗಬೇಕು. ತಾವು ಸಾಮಾಜಿಕ ನ್ಯಾಯ ಎಂದು ಹೇಳುತ್ತೀರಿ. ನಾನೇನು ಸಲಹೆ ಕೊಟ್ಟಿದ್ದೇನೆ, ತಮ್ಮ ಉತ್ತರದಲ್ಲಿ ತಾವೇನಾದರೂ ಅದರ ಬಗ್ಗೆ ಅನೌನ್ಸ್ ಮಾಡುತ್ತೀರಿ ಎಂದು ತಿಳಿದುಕೊಂಡು ನನ್ನ ಮಾತನ್ನು ಮುಗಿಸುತ್ತೇನೆ.

+ ಶ್ರೀ ಎಸ್. ರಾಜಣ್ಣ (ಭಾರತೀನಗರ) :— ಮಾನ್ಯ ಅಧ್ಯಕ್ಷರೇ, ಈ ಬಜೆಟ್ ಮಾಡಿಸಿರುವ ಹಣಕಾಸಿನ ಮಂತ್ರಿಗಳಾದ ಸಿದ್ಧರಾಮಯ್ಯನವರಿಗೆ ನನ್ನ ಕೃತಜ್ಞತೆಗಳನ್ನು ಹೇಳುತ್ತಾ, ತಮಗೂ ಮತ್ತು ಎಲ್ಲಾ ಸದಸ್ಯರಿಗೂ ಹೇಳುತ್ತಾ ಇದು ಐದನೇ ವರ್ಷದ ಕೊನೆಯ ಬಜೆಟ್. ಏನೋ ಅದೃಷ್ಟ 1994 ಡಿಸೆಂಬರ್ 11ನೇ ತಾರೀಖು ಬಹಳ ಬ್ಯಾಲೆನ್ಸ್ಡ್ ಅಸೆಂಬ್ಲಿ ಈ ಚರಿತ್ರೆಯಲ್ಲಿ ಬಂತು. 116 ಜನರು ಆಡಳಿತ ಪಕ್ಷದಲ್ಲಿ, ಈ ಕಡೆ ಕಾಂಗ್ರೆಸ್‌ನಿಂದ 40, ಬಿಜೆಪಿಯವರು 42-43 ಬಂದರು. ಒಂದು ರೀತಿ ಬ್ಯಾಲೆನ್ಸ್ಡ್. ಅಂದರೆ ಪಕ್ಷ ಪಕ್ಷಕ್ಕಿಂತ ವ್ಯಕ್ತಿಗಳ ಮೇಲೆ ಅರಿಸಿ ಬಂದಂಥ ಅಸೆಂಬ್ಲಿ. ಇಂಥ ಅಸೆಂಬ್ಲಿ ಹಿಂದೆ ಬಂದಿರಲಿಲ್ಲ. ಮುಂದೆ ಬರುತ್ತದೋ ಇಲ್ಲವೋ ಗೊತ್ತಿಲ್ಲ. ಉದಾಗೆ 180 ಜನರು ಕಾಂಗ್ರೆಸ್‌ನಲ್ಲಿ ಬಂದಿದ್ದರು. ವಿರೋಧಪಕ್ಷದವರು ಜನತಾದಳದವರು 22 ಈ ರೀತಿ ಬಂದಿದ್ದರು. ಅಂದರೆ ಬ್ಯಾಲೆನ್ಸ್ಡ್ ಬಂದಾಗ ಯಾವಾಗಲೂ ಕೆಲಸವೂ ಬ್ಯಾಲೆನ್ಸ್ ಆಗಿಯೇ ನಡೆದುಕೊಂಡು ಹೋಗುತ್ತದೆ. ಜನರು ಒಂದೊಂದು ಬಾರಿ ಏನು ಮಾಡುತ್ತಾರೆ ಎಂದರೆ ಒಂದೇ ಕಡೆ ವೋಟನ್ನು ಕೊಡುತ್ತಾರೆ. ಅದು ಸರಿಯಲ್ಲ. Balanced Assembly is always good for the democracy of the State and the Country.

ಅಧ್ಯಕ್ಷರು :— ನೀವು ಒಂದು ಕೆಲಸ ಮಾಡಿ. ಒಂದು ರೆಸಲ್ಯೂಷನ್ ಮಾಡಿ ಇನ್ನೊಂದು 15 ವರ್ಷ ಇದೇ ಅಸಂಬ್ಲಿ ಇರಬೇಕು ಎಂದು ಮಾಡು.

ಶ್ರೀ ಎನ್ ರಾಜಣ್ಣ :— ಆ ರೀತಿ ಇದ್ದರೆ ಒಳ್ಳೆಯದು. ನಾನು ಕಂಡಿದ್ದು ಮೊದಲನೇ ಬಾರಿಗೆ ಈ ಸದನಕ್ಕೆ ಬಂದಿರುವುದು. ಭಾರತೀನಗರ ಕ್ಷೇತ್ರದ ಜನತೆಗೆ ನಾನು ಕೃತಜ್ಞತೆಗಳನ್ನು ಹೇಳಬೇಕು. ಏಕೆಂದರೆ ಮೊದಲನೇ ಬಾರಿಗೆ 10ನೇ ಅಸೆಂಬ್ಲಿಗೆ ಒಬ್ಬ ಕನ್ನಡದವನನ್ನು ಅಲ್ಲಿಂದ ಆರಿಸಿ ಕಳುಹಿಸಿದ ಆ ಪ್ರಜೆಗಳು....

ಶ್ರೀ ವಾಟಾಳ್ ನಾಗರಾಜ್:— ಇಲ್ಲ. ಇವರು ಕನ್ನಡ ಇಂಗ್ಲೀಷ್ ಎರಡೂ. ಬರೀ ಕನ್ನಡದವರಾಗುವುದಿಲ್ಲ. ನಾನು ಸಂತೋಷಪಡುತ್ತೇನೆ. ಆದರೆ ನೀವು ಆಗಾಗ್ಗೆ ಇಂಗ್ಲೀಷ್ ಮಾತನಾಡುವುದು ಸರಿಯಲ್ಲ.

ಶ್ರೀ ಎನ್. ರಾಜಣ್ಣ:— ಏನು ಮಾಡುವುದು ಸ್ವಾಮಿ. ನಾನು ಬ್ರಿಟಿಷರು ಇದ್ದ ಜಾಗದಲ್ಲಿ ಇದ್ದೆ. ಅವರು ಈ ದೇಶವನ್ನು 200 ವರ್ಷ ಆಳಿ ಹೋಗಿದ್ದಾರೆ. ಅವರು ಹೋಗುವಾಗ ಹೊತ್ತುಕೊಂಡು ಹೋಗಿದ್ದು ಏನೆಂದರೆ ಬಹಳಷ್ಟು ಬಿಟ್ಟುಹೋದರು. ಇಂಡಿಯನ್ ರೈಲ್ವೆ ಬಿಟ್ಟು ಹೋದರು. ಪಿ. ಅಂಡ್ ಟಿ ಬಿಟ್ಟು ಹೋದರು. ಮೇಯೋ ಹಾಲ್ ಬಿಟ್ಟುಹೋದರು. ದೊಡ್ಡ ದೊಡ್ಡ ಮ್ಯಾನ್ಯುಮೆಂಟಲ್ಸ್ ಬಿಲ್ಡಿಂಗ್ಸ್ ಎಲ್ಲಾ ಬಿಟ್ಟುಹೋದರು. ಸನ್ಮಾನ್ಯ ಅಧ್ಯಕ್ಷರು ಇರುವ ಶ್ರೀನಿವಾಸಪುರ ಪಕ್ಕದಲ್ಲಿ ಗೋಲ್ಡ್‌ಮೈನ್ಸ್ 9 ಸಾವಿರ ಅಡಿ ಕೆಳಗಡೆ ಹೋಗಿ 700 ಟನ್ ಗೋಲ್ಡನ್ನು ಹೊತ್ತುಕೊಂಡು ಹೋದರು. ಅದರ ಜೊತೆಯಲ್ಲಿ ಇನ್ನು ಒಂದನ್ನು ಹೊತ್ತುಕೊಂಡು ಹೋದರು. ಅದೇನೆಂದರೆ ಇದನ್ನು ನಾನು ಹೇಳಿದಲ್ಲ. The First Commander of the Indian Army, Field Martial Cariyappa ಅವರು ಒಂದು ಮಾತನ್ನು ಹೇಳಿದರು. ಇದೇ ಕಾರ್ಯಪ್ಪನವರಿಗೆ ಬ್ಯಾಂಕ್ವೆಟ್ ಹಾಲ್‌ನಲ್ಲಿ ಅವರಿಗೆ ಸನ್ಮಾನ ಮಾಡುವಾಗ discipline, hard work, punctuality, sincerety ಈ ನಾಲ್ಕು ಅವರ ಜೊತೆಯಲ್ಲಿ ಹೊರಟುಹೋಯಿತು. 10 ಪರ್‌ಸೆಂಟೇ ಉಳಿದಿರುವುದು ಎಂದು ಹೇಳಿದರು. ಅಂಥ ಜನರು ಇದ್ದ ಕಡೆ ಇದ್ದು ಬಂದವನು ನಾನು. I am a disciplined soldier. I will do my duty sincerely to the people of my constituency. ಅದಕೋಸ್ಕರ ಅಂಗ್ಲೋ ಕನ್ನಡವನ್ನು ಕೆಲವೊಮ್ಮೆ ನಾನು ಮಾತನಾಡಬೇಕಾಗುತ್ತದೆ. ಆಂಗ್ಲೋ ಕನ್ನಡ ಬಂದರೆ ಅದಕ್ಕೆ ಕಲರ್ ಬರುವುದು ಆ ಭಾಷೆಗೆ ಕಲರ್ ಬರುವುದು. ಈ ವರ್ಷದಲ್ಲಿ ನಾವು ಏನು ಕೆಲಸ ಮಾಡಿದ್ದೇವೊ, 5 ವರ್ಷದಲ್ಲಿ ಮಾಡಿರುವ ಕೆಲಸವನ್ನು ನಿಮಗೆಲ್ಲರಿಗೂ ಕೆಲಸವಾಗಿರುವ ಬಗ್ಗೆ ಗೊತ್ತು. ಆದರೂ ಹೇಳುವುದನ್ನು ಹೇಳಬೇಕಲ್ಲಾ. ವಿರೋಧ ಮಾಡುವುದನ್ನು ಮಾಡಬೇಕಲ್ಲಾ. ಒಳ್ಳೆಯ ಆಹಾರ ಮಾಡಿ, ಫಲವತ್ತಾದ ಆಹಾರ ಮಾಡಿ ಇಟ್ಟರೂ ಅದರಲ್ಲಿ ಕಲ್ಲನ್ನು ಹುಡುಕುತ್ತೀರಿ. ಅನ್ನದಲ್ಲಿ, ಸಾರಿನಲ್ಲಿ, ಇಡ್ಲಿಯಲ್ಲಿ ಹುಡುಕುತ್ತೀರಿ. ಆದರೆ ಮೊಸರಿನಲ್ಲಿಯೂ ಕಲ್ಲನ್ನು ಹುಡುಕುತ್ತೀರಿ. ಆ ರೀತಿ ಹುಡುಕುವುದು ಹುಡುಕಬೇಕಾಗುತ್ತದೆ. ಹೇಳುವುದನ್ನು ಹೇಳಬೇಕಾಗುತ್ತದೆ. ಇದಕ್ಕಿಂತ ಒಳ್ಳೆಯ ಬಜೆಟನ್ನು ಕೊಡುವುದು ಕಷ್ಟ. ಉದಾಹರಣೆಗೆ ಪಾರ್ಲಿಮೆಂಟ್‌ನಲ್ಲಿ ಬಜೆಟ್‌ನಲ್ಲಿ ಯಾವುದನ್ನು ಬಿಟ್ಟಿದ್ದಾರೆ? ಎಲ್ಲದಕ್ಕೂ ತೆರಿಗೆಯನ್ನು ಹಾಕಿದ್ದಾರೆ. ಯಾವುದನ್ನು ಬಿಟ್ಟಿಲ್ಲ. ಆ ರೀತಿ ಬಿಟ್ಟರೆ ಸರ್ಕಾರ ನಡೆಸುವುದಕ್ಕಾಗುವುದಿಲ್ಲ. ಆದರೆ ಸನ್ಮಾನ್ಯ ಸಿದ್ಧರಾಮಯ್ಯನವರು ಇಲ್ಲಿ ಹಾಕಿರತಕ್ಕದ್ದು, ಬಡವರಿಗೆ ಏನು ಅನುಕೂಲ ಆಗಬೇಕು, ಅದಷ್ಟೂ ಮ್ಯಾಗ್ನಿಮಮ್ ಅನುಕೂಲ ಮಾಡುವುದಕ್ಕೆ ಮಾಡಿದ್ದಾರೆ. ಆದರೆ ನೀವು ಹೇಳುತ್ತೀರಿ, ಇದು ಎಲೆಕ್ಷನ್ ಇಯರ್, ಅದಕೋಸ್ಕರ ಇಷ್ಟು ಕನ್ಸೀಷನ್ ಕೊಟ್ಟು ಬಿಟ್ಟಿದ್ದೀರಿ ಎಂದು ಹೇಳುತ್ತೀರಿ. ನಮ್ಮ ಮಾನ್ಯ ಖರ್ಗೆಯವರು ಹೇಳುತ್ತಾರೆ 'ಚಾರ್

ಆನೇಕೋ ಮುರ್ಗಿ, ಬಾರ್ ಆನೇಕೋ ಮಸಾಲೆ' ಎಂದು ಹೇಳಿದ್ದು ಪೇಪರ್‌ನಲ್ಲಿ ಬಂದಿತ್ತು. ಒಳ್ಳೆಯದು. ಅವರು ಬಹಳಷ್ಟು ಅನುಭವಸ್ಥರು. ಅವರು ಹೇಳಲಿ ಸಂತೋಷ. ಆದರೆ ನಾವು ಮಾಡಿರುವಂತಹ ಕೆಲಸ ಜನಕ್ಕೆ ಗೊತ್ತಿದೆ. ಹಿಂದೆ ಏನಾಗುತ್ತಿತ್ತು ಅಂದರೆ ಬೊಂಗಳೂರಿನಿಂದಲೇ ದೆಹಲಿ ತೋರಿಸಿ ಓಟು ತೆಗೆದುಕೊಳ್ಳುವ ಕಾಲ ಇತ್ತು. ಕರ್ನಾಟಕದಿಂದಲೇ ದೆಹಲಿ ತೋರಿಸುತ್ತಿದ್ದರು. ಆದರೆ ಈ ಬಾರಿ ನಾನು ಅಸೆಂಬ್ಲಿಗೆ ಮೊದಲ ಬಾರಿ ಬಂದಿದ್ದೇನೆ. ಅವರೆಲ್ಲಾ ಎಫಿಶಿಯೆನ್ಸಿ ಮೇಲೆ ಬಂದಿದ್ದೀರಿ. ಸಂತೆಗಳಿಗೆ ಹೋದರೆ ಹಾಗೂ ದೊಡ್ಡ ದೊಡ್ಡ ಫಂಕ್ಷನ್ಸ್‌ಗಳಿಗೆ ಹೋದರೆ ಹಿಂದಿನ ಕಾಲದಲ್ಲಿನ ಮಾತು. ಮೂವತ್ತು ವರ್ಷದ ಹಿಂದಿನ ಕಾಲ. ನಾನು ಸಿನೆಮಾಗೆ ಹೋಗುತ್ತಿರಲಿಲ್ಲ. ಅಲ್ಲಿ ಒಂದು ಬಾಕ್ಸ್ ಇಟ್ಟುಕೊಂಡಿರುತ್ತಿದ್ದರು. ಬಾಕ್ಸ್ ಇಟ್ಟು ಕೊಂಡು 'ದೇಖೋ ದೇಖೋ ದೆಹಲಿ, ಇದರ್ ಸೇ ದೇಖೋ ದೇಖೋ ದೇಖೋ ಬಾಂಬೆ ಇದರ್ ಸೇ ದೇಖೋ, ಚೆನ್ನೈ ದೇಖೋ ದೇಖೋ, ದೇಖೋ ದೇಖೋ ಬಾಂಬೆ ಬೀಚ್' ಎಂದು ಹೇಳಿ ಇಲ್ಲಿಂದ ತೋರಿಸುತ್ತಿದ್ದ. ಈಗಿಲ್ಲ, ಹಿಂದೆ ಈ ರೀತಿ ಆಗುತಿತ್ತು. ಈಗ ಜನ ಆದಷ್ಟು ಜನ ಕರೆಕ್ಟಾಗಿದ್ದಾರೆ.

ಶ್ರೀ ವಾಟಾಳ್ ನಾಗರಾಜ್ :— ಈಗ ಆ ತರಹ ನಮಗೆಲ್ಲಾ ನೀವು ತೋರಿಸುತಿದ್ದೀರಿ.

ಶ್ರೀ ಎಸ್. ರಾಜಣ್ಣ :— ಆ ತರಹ ತೋರಿಸುವಂತಹ ಕಾಲವೂ ಇತ್ತು. ಈಗ ಬದಲಾವಣೆ ಆಗಿದೆ. ಪಾರ್ಲಿಮೆಂಟೂ ತೋರಿಸಿ ಓಟು ತೆಗೆದುಕೊಳ್ಳುವ ಕಾಲ ಇತ್ತು. ಈಗ ಬದಲಾವಣೆ ಆಗಿದೆ. ಈಗ ತಮ್ಮ ತಮ್ಮ ಕೆಪ್ಯಾಸಿಟಿ ಮೇಲೆಯೇ ಬರಬೇಕು. ಜನ ಬಹಳ ಎಚ್ಚೆತ್ತುಕೊಂಡಿದ್ದಾರೆ ಪಕ್ಷಕ್ಕಿಂತ ವ್ಯಕ್ತಿಯನ್ನು ನೋಡುವಂತಹ ಕಾಲ ಇದು. ಆದಕೊಸ್ಕರ ನಾವು ಈ ಕಲಿಯುಗದ ಕೊನೆಯಲ್ಲಿ ಇದ್ದೇವೆ. 1994-95ರ ಹಿಂದೆ ಕಲಿಯುಗದ ಕೊನೆಯಲ್ಲಿ ಎಲ್ಲಿ ಹೋದರೂ ಕ್ಯೂ. ರೇಷನ್ ಡಿಪೋಗೆ ಹೋದರೆ ಫುಡ್ ಅಂಡ್ ಸಿವಿಲ್ ಸಪ್ಲೈಸ್‌ನಲ್ಲಿಕ್ಯೂ. ನೀರಿಗೆ ಹೋದರೆ ಕ್ಯೂ. ಬಸ್‌ಗೆ ಹೋದರೆ ಕ್ಯೂ. ಎಂಪ್ಲಾಯ್‌ಮೆಂಟ್‌ಗೆ ಹೋದರೂ ಕ್ಯೂ. ಈ ಕ್ಯೂಗಳನ್ನು ನೋಡಿ ಆದಷ್ಟು ಕ್ಯೂ ಕಡಿಮೆ ಮಾಡುವಂತಹ ಸರ್ಕಾರ, ಮಾಡಿದಂತಹ ಸರ್ಕಾರ ಜನತಾ ದಳದ ಸರ್ಕಾರ. ನಮ್ಮ ಲೀಡರ್ಸ್‌ಗೆ ಈ ಕ್ರೆಡಿಟ್ ಹೋಗಬೇಕು. ಯಾವ ವಿಚಾರದಲ್ಲಿ ಮಾಡಿಲ್ಲ ಎಂದು ನಾವು ಯೋಚನೆ ಮಾಡಿ ನೋಡಬೇಕಾಗುತ್ತದೆ. The salient feature of the State Budget for the year 1999-2000, the budget offers maximum reliefs to all sections of the society, a near tax free document. ಎಜ್ಯುಕೇಷನ್ ವಿಚಾರ. ವಿದ್ಯಾಸಂಸ್ಥೆಗೆ 3 ಸಾವಿರ ಚಿಲ್ಲರೆ ಕೋಟಿ 1999-2000ನೇ ಇಸವಿಗೆ ಇಟ್ಟಿದ್ದೇವೆ. ಆರೋಗ್ಯಕ್ಕೆ ಸಹ ಮೀಸಲು ಇಟ್ಟಿದ್ದೇವೆ. Housing, irrigation and power sectors have been identified as priority sectors and given a major preference in the Bidget, from the total annual plan of Rs.5,888 crores. ಯಾವ್ಯಾವುದಕ್ಕೆ

ಇಡಬೇಕೋ ಪ್ರಾಮುಖ್ಯತೆ ಅದಕ್ಕೆಲ್ಲಾ ಇಟ್ಟು ಒಳ್ಳೆಯ ಬಜೆಟ್ ಪ್ರೆಸೆಂಟ್ ಮಾಡಿದ್ದಾರೆ ಎಂದು ನಾನು ಹೇಳುವುದಕ್ಕೆ ಇಚ್ಛಿಪಡುತ್ತಿದ್ದೇನೆ. ಇದರಲ್ಲಿ 31 ಪರ್ಸೆಂಟ್ ಇರಿಗೇಷನ್‌ಗೆ ಇಟ್ಟಿದ್ದಾರೆ. ಅದು 1814 ಕೋಟಿ ರೂಪಾಯಿ ಮತ್ತು 1007. 42 ಕೋಟಿ ರೂಪಾಯಿ ಪವರ್ ಸೆಕ್ಟಾರ್‌ಗೆ ಕೊಟ್ಟಿದ್ದಾರೆ. ಪವರ್ ಇವತ್ತು ಏನು ಪರಿಸ್ಥಿತಿಯಲ್ಲಿದೆ ಎಂದು ನಿಮಗೆ ಗೊತ್ತಿದೆ. ನಮ್ಮ ಸರ್ಕಾರ ಬಂದ ಮೇಲೆ ಜನಕ್ಕೆ ಅದಷ್ಟು ಅನುಕೂಲ ಮಾಡಿಕೊಡುವುದಕ್ಕೆ ಪ್ರಯತ್ನ ಮಾಡುತ್ತಿದೆ. ಪವರ್ ಇವತ್ತು ಏನಾದರೂ ಬೆಳಕು, ದೀಪ ಇದೆ ಎಂದರೆ ಈ ಕ್ರೆಡಿಟ್ ಮೊದಲು ಹೋಗಬೇಕಾದುದು ಧೀಮಂತರ ನಾಯಕ ಕಿಂಗಲ್ ಹನುಮಂತಯ್ಯನವರಿಗೆ. ಎರಡನೆಯದು ದಿ. ಸರ್ ಎಂ. ವಿಶ್ವೇಶ್ವರಯ್ಯ ಹಾಗೂ ಮೂರನೆಯದು ಶ್ರೀ ನಿಜಲಿಂಗಪ್ಪನವರಿಗೆ ಹೋಗಬೇಕು. ಶರಾವತಿ ಪವರ್‌ಸ್ಟೇಷನ್ ಇರಲಿಲ್ಲ ಎಂದಿದ್ದರೆ ನಾವೆಲ್ಲಾ ಕತ್ತಲಲ್ಲಿಯೇ ಇರಬೇಕಾಗಿತ್ತು. ಆ ಧೀಮಂತ ನಾಯಕರು ಮಾಡಿದ ಕಾರಣಕ್ಕೋಸ್ಕರ ಇವತ್ತು ಅಷ್ಟೋ ಇಷ್ಟೋ ಬೆಳಕು ಇದೆ. ಆದರೆ ಈ ದೇಶಕ್ಕೆ ಮೊದಲು ಪವರ್ ಬಂದಿದ್ದು 1892ರಲ್ಲಿ. ಬ್ರಿಟಿಷರು ಶಿವನಸಮುದ್ರದಿಂದ ಕೋಲಾರಕ್ಕೆ 142 ಕಿಲೋ ಮೀಟರ್ ಆಳೆಯುತ್ತಾರೆ. ಆ ಪವರ್ ಬಿಟ್ಟರೆ ಈ ಧೀಮಂತ ನಾಯಕರೇ ಕರ್ನಾಟಕದಲ್ಲಿ ಈ ಪವರ್ ಉತ್ಪಾದನೆ ಮಾಡಿದ್ದು. ಎರಡನೆಯದು ಈಗ ನಮ್ಮ ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ ಪವರ್‌ಗೆ ಎಷ್ಟು ಮಾನ್ಯತೆ ಕೊಡಬೇಕೋ ಅಷ್ಟು ಮಾನ್ಯತೆ ಕೊಟ್ಟು ಈಗ ಮಿಲಿಯನ್ಸ್ ಆಫ್ ಯೂನಿಟ್ ಇನ್‌ಕ್ರೀಸ್ ಆಗುತ್ತಿದೆ. ಇದಕ್ಕೆ ಕ್ರೆಡಿಟ್ ನಮ್ಮ ಸರ್ಕಾರದ ನಾಯಕರಿಗೆ ಕೊಡಬೇಕು. ನಂತರ ಪಾಪ್ಯುಲೇಷನ್‌ಗೆ ಬಂದಾಗ ಕೆಲವು ವಿಚಾರ ಹೇಳುತ್ತೇನೆ. ಅಗ್ರಿಕಲ್ಚರ್, ರೂರಲ್ ಡೆವಲಪ್‌ಮೆಂಟ್‌ಗೆ 9.5 ಪರ್ಸೆಂಟ್ ಕೊಟ್ಟಿದ್ದಾರೆ. ಬಜೆಟ್ ಪುಸ್ತಕದಲ್ಲಿನ ಪುಟ 25ರಲ್ಲಿ. ಎಜ್ಯುಕೇಷನ್‌ಗೆ 6.27 ಪರ್ಸೆಂಟ್, ಪೇಜ್ ನಂಬರ್ 27 ಮತ್ತು 28. ಹೆಲ್ತ್‌ಗೆ 3.93 ಪರ್ಸೆಂಟ್ ಪುಟ 31. ವಾಟರ್‌ಸಪ್ಲೈಗೆ ಮತ್ತು ಸ್ಯಾನಿಟರಿಗೆ 8.13 ಪರ್ಸೆಂಟ್, ಪುಟ 38. ಹೌಸಿಂಗ್ ಅಂಡ್ ಅರ್ಬನ್ ಡೆವಲಪ್‌ಮೆಂಟ್‌ಗೆ 5.85 ಪರ್ಸೆಂಟ್ ಪುಟ 37. ನಾವು ಒಳ್ಳೆಯ ಕೆಲಸ ಮಾಡಿದರೆ ಜನ ನಮಗೆ ಮತ್ತೆ ಓಟು ಕೊಡುತ್ತಾರೆ. ನಾವು ಆವಾಗಲೇ ಏನೇನೋ ಯೋಚನೆ ಮಾಡುತ್ತಿದ್ದೇವೆ. ಯಾರು ಬರುತ್ತಾರೆ ಎಂದು ಕೆಲವರು ಯೋಚನೆ ಮಾಡುತ್ತಿದ್ದಾರೆ. ನಾವೇ ಬರುತ್ತೇವೆ. ಸಾಲ ಇದ್ದರೂ ನಾವೇ ತೀರಿಸುತ್ತೇವೆಂದು ಹೇಳುವುದಕ್ಕೆ ಇಚ್ಛಿಪಡುತ್ತೇನೆ.

ಅಧ್ಯಕ್ಷರು :— ಪಾರ್ಲಿಮೆಂಟ್‌ನಲ್ಲಿ ನಿಮ್ಮ ಕಾನ್‌ಸ್ಟಿಟ್ಯುಯೆನ್ಸಿಯಿಂದ ಎಷ್ಟು ಬಂದಿತ್ತು? ನಿಮ್ಮ ಪಾರ್ಟಿಗೆ ಎಷ್ಟು ಬಂದಿತ್ತು ಎಂದು ಕೇಳಿದೆ.

SRI N. RAJANNA :— That is a different election, Sir. ಈ ಬಾರಿ ಮಾನ್ಯ ವಾಜಪೇಯಿ ಅವರಿಗೆ ಕೊಡಬೇಕೆಂದು ಹೇಳಿ ಸ್ವಲ್ಪ ವ್ಯತ್ಯಾಸ ಆಗಿದೆ. ಒಂದು ಬಾರಿ ಅದಕ್ಕೋಸ್ಕರವಾಗಿ ವ್ಯತ್ಯಾಸ ಆಗಿದೆ.

ಅಧ್ಯಕ್ಷರು :— ಆಯಿತು ಮುಂದುವರಿಸಿ.

ಶ್ರೀ ಎನ್. ರಾಜಣ್ಣ :— ಮಾನ್ಯ ವಾಜಪೇಯಿ ಅವರಿಗೆ ಪ್ರಧಾನ ಮಂತ್ರಿ ಮಾಡಬೇಕೆಂದು ಜನ ಓಟು ಹಾಕಿದ್ದಾರೆ. ಈ ಬಾರಿ, ಮೊದಲನೇ ಬಾರಿ ಮತ್ತು ಕೊನೆಯ ಬಾರಿ.

ಶ್ರೀ ಎಚ್.ಕೆ. ಕುಮಾರಸ್ವಾಮಿ :— ಕಳೆದ ಬಾರಿ, ಕೊನೆಯ ಬಾರಿ.

ಶ್ರೀ ಎನ್. ರಾಜಣ್ಣ :— ಒಂದೊಂದು ಟರ್ಮ್ ಕೊಡುತ್ತಾರೆ. ನೆಕ್ಸ್ಟ್ ಯಾರಿಗೆ ಕೊಡುತ್ತಾರೆಂದು ಹೇಳುವುದಕ್ಕೆ ಆಗುವುದಿಲ್ಲ. ಕೆಲವರು ಏನೇನೋ ಯೋಚನೆ ಮಾಡುತ್ತಿದ್ದಾರೆ. ನಾವು ನೋಡೋಣ. ಪರ್‌ಫಾರ್ಮೆನ್ಸ್ ಮೇಲೆ ಹೋಗುತ್ತದೆ. ಒಂದು ಸಾರಿ ಮಾನ್ಯ ವಾಜಪೇಯಿಯವರೂ ಈ ದೇಶಕ್ಕೆ ದುಡಿದವರು ಎಂದು ಹೇಳಿ ಈ ಬಾರಿ ಕೊಟ್ಟಿದ್ದಾರೆ. ಮುಂದಿನ ಬಾರಿ ನೋಡೋಣ.

Para 132, Industry. Industrialisation efforts to attract new Industries resulted in private sector investment to our State in last four years i.e. Rs.17,000 crores. For example, ನಾವು ಏನು ಮಾಡಿದ್ದೇವೆ ಎನ್ನುವುದನ್ನು ತಮ್ಮ ಗಮನಕ್ಕೆ ತರುವುದಕ್ಕೆ ಇಚ್ಛಿಪಡುತ್ತೇನೆ. Information Technology and Software Exports is the major factor, which is vastly growing and which has brought pride and honour to Bangalore and Karnataka. Today we have to be proud that Bangalore is one among the top cities in the world in the field of technology. The technology park situated in white field is one of the biggest in Asia for Software exports. We should be thankful to Karnataka State Government who really have done a wonderful job to promote Information Technology sector. We should also be grateful to Mr. Deve Gowda, Ex-Prime Minister who in his tenure had invited Mr. Bill Gates to India and Bangalore, who is the Chairman of Microsoft and the number one man in the computer Industry and Information Technology and also one among the richest person in the world. We should be thankful to Dr. Man Mohan Singh who really helped in promoting the Information Technology in India. Sir, I wanted to bring to your notice, when Dr. Man Mohan Singh started this in 1992 it was Rs. 5 crores worth, today it is Rs.2600 crores worth. This is the highest in Asia i.e. in Bangalore, Karnataka.

The credit must go to our leaders, our Hon'ble Chief Minister Mr. J.H. Patel and Mr. Siddaramaiah & also Heavy Industries Minister then;

ಅಧ್ಯಕ್ಷರು :— ಆಗ ಮಾನ್ಯ ದೇಶಪಾಂಡೆಯವರು ಇದ್ದರು. ಈಗ ಅವರ ಹೆಸರು ಬೇಡ.

ಶ್ರೀ ಎನ್. ರಾಜಣ್ಣ :— ಇನ್ನುಮೇಲೆ ಬಿ.ಎಲ್. ಶಂಕರ್‌ಗೆ ಆ ಹೆಸರು ಹೋಗುತ್ತದೆ. ಇನ್ನು ಮೇಲೆ ಅವರು 2600 ಕೋಟಿಯಿಂದ 5000 ಕೋಟಿಗೆ ಎತ್ತುಕೊಂಡು ಹೋದರೆ the credit will go to the Hon. Minister.

ಅಧ್ಯಕ್ಷರು :— ಮಾನ್ಯ ಎಂಪಿ ಪ್ರಕಾಶ್ ಅವರಿಗೆ ಏನೂ ಇಲ್ಲವಾ?

ಶ್ರೀ ಎನ್. ರಾಜಣ್ಣ :— ಅವರೂ ಬಹಳ ಕೆಲಸ ಮಾಡಿದ್ದಾರೆ. ಅವರದ್ದು ಗಾಂಧಿಯನ್ ತತ್ವದಲ್ಲಿನ ವಿಚಾರ. ಆ ಬಗ್ಗೆ ಹೇಳುವುದು ಬಹಳ ಇದೆ.

ಅಧ್ಯಕ್ಷರು :— ಅವರಿಗೂ ಕೊಡಿ ಕ್ರೆಡಿಟ್. ಮಾನ್ಯ ಎಂ.ಎಸ್. ಪಾಟೀಲ್ ಅವರೂ ಒಳ್ಳೆಯವರು. ಅವರಿಗೂ ಸ್ವಲ್ಪ ಕ್ರೆಡಿಟ್ ಕೊಡಿ.

6.20 ಪಿ.ಎಂ.

ಶ್ರೀ ಎನ್. ರಾಜಣ್ಣ :— ಬಜೆಟ್ ಪುಸ್ತಕದ ಪ್ಯಾರಾ 133ರಲ್ಲಿ ಏನು ಹೇಳಿದ್ದಾರೆಂದರೆ, ``The KIADB has developed 12, 167 acres of industrial sites during the last four years.'' ಇಷ್ಟೆಲ್ಲಾ ತಾವು ಮಾಡುತ್ತಿದ್ದೀರಲ್ಲಾ, ಮಾನ್ಯ ಸದಸ್ಯರಾದ ಶ್ರೀರಾಮರೆಡ್ಡಿಯವರು ಹೇಳಿರುವಂತೆ ಕೆಲವು ಕಾರ್ಖಾನೆಗಳ ಮಾಲೀಕರುಗಳೂ ಬಡ ನೌಕರರಿಗೆ ನಿಜವಾಗಿಯೂ ತೊಂದರೆ ಕೊಡುತ್ತಿದ್ದಾರೆ. I think, Sri B.L. Shankar will take serious note about it. ಇದನ್ನು ಅವರು ಡಿಬೇಟ್ ಮಾಡುವಾಗ ಹೇಳಿದ್ದು. ನಾನೂ ಕೂಡ ಈಗ ಹೇಳುತ್ತಿರುವುದೇನೆಂದರೆ, ಬೆಂಗಳೂರಿನಲ್ಲಿರುವ ಕೆಲವು ಕಾರ್ಖಾನೆಗಳ ಮಾಲೀಕರುಗಳು ಕೋಟ್ಯಾಧೀಶರಾಗಿದ್ದು ಅವರುಗಳು ಬಡ ನೌಕರರುಗಳಿಗೆ ಕೊಡುತ್ತಿರುವ ತೊಂದರೆಯನ್ನು ತಾವು ಏನಾದರೂ ಮಾಡಿ ನಿಲ್ಲಿಸಬೇಕು. ನಮ್ಮ ದೇಶದಲ್ಲಿ ಇವೊತ್ತು 70 ಮಿಲಿಯನ್ ನಿರುದ್ಯೋಗಿ ಪದವೀಧರರಿದ್ದಾರೆ. ಕೋಟ್ಯಾಧೀಶರಾದವರು ಮತ್ತಷ್ಟು ಕೋಟ್ಯಾಧೀಶರಾಗಿದ್ದು ಬಡವರ ಮೇಲೆ ಕರುಣೆಯಿರಬೇಕು. ಮೆಟಲ್ ಲ್ಯಾಂಪ್ ಫ್ಯಾಕ್ಟರಿಯಲ್ಲಿ 400 ಜನ ಕಾರ್ಮಿಕರಿದ್ದು ಇದರ ಬಗ್ಗೆ ನಾನು ಹಿಂದೆಯೇ ಮುಖ್ಯಮಂತ್ರಿಗಳ ಗಮನಕ್ಕೆ ತಂದಿದ್ದೇನೆ. ದಿನಾಂಕ 27.3.98ರಲ್ಲಿ ನಾನು ಭಾಷಣ ಮಾಡಿತ್ತಾ ತಿಳಿಸಿದ್ದು, ಇದಕ್ಕೆ ಮಾನ್ಯ ಮುಖ್ಯಮಂತ್ರಿಗಳು ಉತ್ತರಿಸುತ್ತಾ ಇದಕ್ಕೆ ಏನಾದರೊಂದು ಪರಿಹಾರ

ಕಂಡು ಹಿಡಿದು ಸಹಾಯ ಮಾಡೋಣವೆಂದು ತಿಳಿಸಿದರು. ಆದರೆ, ಅವರಿಗೆ ಇದುವರೆವಿಗೂ ಯಾವುದೇ ಸಹಾಯವಾಗಿಲ್ಲ. ಆದುದರಿಂದ, ದಯವಿಟ್ಟು ಇದಕ್ಕೆ ಪರಿಹಾರ ಕಂಡುಹಿಡಿಯಬೇಕೆಂದು ನಾನು ಕೇಳಿಕೊಳ್ಳುತ್ತಿದ್ದೇನೆ.

ಶ್ರೀ ಬಿ.ಎಲ್. ಶಂಕರ್ (ಭಾರಿ ಮತ್ತು ಮಧ್ಯಮ ಕೈಗಾರಿಕಾ ಸಚಿವರು) :— ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರಾದ ರಾಜಣ್ಣನವರು ಪ್ರಸ್ತಾಪಿಸುತ್ತಿರುವ ಅಂಶ ನಿಜವಿದ್ದು, ಅವರ ಕ್ಷೇತ್ರದಲ್ಲಿ ಮೆಟಲ್ ಲ್ಯಾಂಪ್ಸ್ ಎನ್ನುವಂಥ ಒಂದು ಕೈಗಾರಿಕೆಯಿದ್ದು, ಕೈಗಾರಿಕೆಯಿರುವ ಜಾಗವನ್ನು ವಾಣಿಜ್ಯ ಉದ್ದೇಶಕ್ಕೋಸ್ಕರ ಬಳಸಿಕೊಂಡು ಕೈಗಾರಿಕೆಯನ್ನು ಅಲ್ಲಿಂದ ನಗರದ ಹೊರವಲಯಕ್ಕೆ ಸ್ಥಳಾಂತರಿಸಿ ಕಾರ್ಖಾನೆಯಲ್ಲಿರುವ ಎಲ್ಲಾ ಕಾರ್ಮಿಕರಿಗೂ ಅಲ್ಲಿ ಉದ್ಯೋಗ ಕೊಡುತ್ತೇವೆಂದು ಅಗತ್ಯವಿರುವ ಎಲ್ಲಾ ಪರವಾನಗಿಯನ್ನು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಮತ್ತಿತರ ಸಂಸ್ಥೆಗಳಿಂದ ಪಡೆದುಕೊಂಡಿದ್ದಾರೆ. ಆದರೆ, ಯಾರಿಗೂ ಕೂಡ ಉದ್ಯೋಗ ಕೊಟ್ಟಿಲ್ಲ. ಇದರ ಬಗ್ಗೆ ನಾನು ಕಾರ್ಮಿಕ ಸಚಿವನಾಗಿದ್ದಂಥ ಸಂದರ್ಭದಲ್ಲಿ ಸಂಬಂಧಪಟ್ಟ ಕಾರ್ಯದರ್ಶಿಯವರಿಗೆ ಸೂಚನೆ ಕೊಟ್ಟಿದ್ದೇನೆ. ಅನ್‌ಫೇರ್ ಲೇಬರ್ ಪ್ರಾಕ್ಟಿಸ್ ಮಾಡಿದ್ದಕ್ಕೋಸ್ಕರ ಮೆಟಲ್ ಲ್ಯಾಂಪ್ಸ್ ಕಂಪನಿ ವಿರುದ್ಧ ಪ್ರಾಸಿಕ್ಯೂಷನ್ ಜಾರಿಗೊಳಿಸಬೇಕೆಂದು ಮತ್ತು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವಿರಬಹುದು ಅಥವಾ ಬೆಂಗಳೂರು ಮಹಾನಗರಪಾಲಿಕೆ ಇರಬಹುದು, ಅಲ್ಲಿನ ಕಾರ್ಖಾನೆಯಲ್ಲಿದ್ದ ಕಾರ್ಮಿಕರಿಗೆ ಪುನಃ ಉದ್ಯೋಗ ಕೊಡುವವರೆಗೆ ಅವರಿಗೆ ಯಾವುದೇ ಅಗತ್ಯ ಪರವಾನಗಿಯನ್ನು ಮತ್ತು ಕಮರ್ಷಿಯಲ್ ಎಕ್ಸ್‌ಪ್ಲಾಯಿಟ್ ಮಾಡಲು ಆ ಜಾಗವನ್ನು ಕೊಡಬಾರದೆಂದು ನಾವು ಈಗಾಗಲೇ ನಿರ್ಣಯ ಕೈಗೊಂಡಿದ್ದೇವೆ.

ಶ್ರೀ ಎನ್. ರಾಜಣ್ಣ :— ಧನ್ಯವಾದಗಳು. ಅಲ್ಲಿ ಇಬ್ಬರು ಅಧಿಕಾರಿಗಳಿದ್ದಾರೆ. ಒಬ್ಬರು ಸುಂದರಮೂರ್ತಿ ಮತ್ತೊಬ್ಬರು ಷಣ್ಮುಗಂ, ಇವರು ವ್ಯವಸ್ಥಾಪಕ ನಿರ್ದೇಶಕರಾಗಿದ್ದಾರೆ. ಅವರುಗಳಿಗೆ ಬಡವರ ಕಷ್ಟ ಏನೆಂಬುದು ಗೊತ್ತಿಲ್ಲ. ಇದನ್ನು ನಾನು ರಾಜಕೀಯವಾಗಿ ಹೇಳುತ್ತಿಲ್ಲ. ದಯಮಾಡಿ ಬಿ.ಜೆ.ಪಿ. ನಾಯಕರುಗಳೆಲ್ಲರೂ ಇದರ ಬಗ್ಗೆ ಕಾಳಜಿ ವಹಿಸಿ ನಮ್ಮ ಪರವಾಗಿ ಬಡ ಕಾರ್ಮಿಕರಿಗೆ ಸಹಾಯ ಮಾಡಬೇಕೆನ್ನುವ ಉದ್ದೇಶದಿಂದ ಈ ವಿಷಯದ ಮೇಲೆ ಮಾತನಾಡುತ್ತಿದ್ದೇನೆ. ಇನ್ನು ನೈರುತ್ಯ ರೈಲ್ವೆ ವಲಯದ ಬಗ್ಗೆ ಹೇಳುವುದಾದರೆ, ಇದು ಈಗಾಗಲೇ ಬೆಂಗಳೂರಿನಲ್ಲಿ ಸ್ಥಾಪನೆಯಾಗಿದ್ದು ಇದಕ್ಕಾಗಿ ರೂ. 12 ಕೋಟಿ ಖರ್ಚು ಮಾಡಲಾಗಿದೆ. ನಾನು ತಮ್ಮಲ್ಲಿ ಕಳಕಳಿಯಿಂದ ಕೇಳಿಕೊಳ್ಳುವುದಿಷ್ಟೆ; ರಾಜ್ಯದಲ್ಲಿ ಇನ್ನೊಂದು ರೈಲ್ವೆ ವಲಯ ಮಾಡಬೇಕೆಂದಿದ್ದರೆ, ಉತ್ತರ ಭಾರತದ ಒಂದು ರಾಜ್ಯದಲ್ಲಿ ಎರಡು ಕಡೆಗಳಲ್ಲಿ ರೈಲ್ವೆ ವಲಯಗಳನ್ನು ಮಾಡಿರುವ ರೀತಿಯಲ್ಲಿಯೇ, ಉತ್ತರ ಕರ್ನಾಟಕದ ಭಾಗದ ಜನರಿಗೆ ಅನುಕೂಲವಾಗುವಂತೆ ರೈಲ್ವೆ ವಲಯವನ್ನು ಹುಬ್ಬಳ್ಳಿ-ಧಾರವಾಡದಲ್ಲಿ ಮಾಡಬೇಕು. ನೈರುತ್ಯ ರೈಲ್ವೆ ವಲಯ ಈಗಾಗಲೇ ಬೆಂಗಳೂರಿನಲ್ಲಿ ಸ್ಥಾಪನೆಯಾಗಿದ್ದು ಇದಕ್ಕೆ ರೈಲ್ವೆ ಬೋರ್ಡ್ ಅಪ್ರೂವ್ ಮಾಡಿ, ಕ್ಯಾಬಿನೆಟ್ ಸಹ ಅಪ್ರೂವ್

ಮಾಡಿದ್ದು, ಇಲ್ಲಿ ಸದರಿ ರೈಲ್ವೆ ವಲಯ ಆಗಲೇ ಪ್ರಾರಂಭವಾಗಿರುವುದರಿಂದ ದಯವಿಟ್ಟು ಇದನ್ನು ಹುಬ್ಬಳ್ಳಿ-ಧಾರವಾಡಕ್ಕೆ ಬದಲಾಯಿಸುವ ಪ್ರಯತ್ನ ಮಾಡಬೇಡಿ. ಮತ್ತೊಂದು ವಿಷಯವೇನೆಂದರೆ, ಕೇಂದ್ರದಲ್ಲಿ ತಮ್ಮದೇ ಸರ್ಕಾರವಿರುವುದರಿಂದ ತಾವು ತಮ್ಮ ಪಕ್ಷದ ನಿಯೋಗವನ್ನು ದೆಹಲಿಗೆ ಕರೆದುಕೊಂಡು ಹೋಗಿ ಹುಬ್ಬಳ್ಳಿ-ಧಾರವಾಡದಲ್ಲೊಂದು ರೈಲ್ವೆ ವಲಯ ಸ್ಥಾಪಿಸುವುದಕ್ಕೆ ಕ್ರಮ ಕೈಗೊಳ್ಳಬೇಕೆಂದು ಕೇಂದ್ರ ಸರ್ಕಾರಕ್ಕೆ ತಿಳಿಸಬೇಕೆಂದು ನಾನು ತಮ್ಮ ಮೂಲಕ ಅವರಲ್ಲಿ ಕೇಳಿಕೊಳ್ಳುತ್ತಿದ್ದೇನೆ. ಇನ್ನೊಂದು ವಿಚಾರವೇನೆಂದರೆ, ಹಿಂದೆ ಕೇಂದ್ರ ಸರ್ಕಾರದಲ್ಲಿ ನಮ್ಮದೇ ಸರ್ಕಾರವಿದ್ದಿತಾದರೂ ಕೆಲಸ ಮಾತ್ರ ಆಗಲಿಲ್ಲ. ದೇವನಹಳ್ಳಿಯಲ್ಲಿ ವಿಮಾನನಿಲ್ದಾಣ ಸ್ಥಾಪಿಸಿದರೆ ನಿಮಗೆ ಒಳ್ಳೆಯ ಹೆಸರು ಬರುತ್ತದೆ.

ಶ್ರೀ ವಾಟಾಳ್ ನಾಗರಾಜ್:— ಆ ಏರ್‌ಪೋರ್ಟ್ ಬಂತು.

ಶ್ರೀ ಎನ್. ರಾಜಣ್ಣ:— ಹಾಗಾದರೆ ಅವರಿಗೆ ಒಳ್ಳೆಯ ಹೆಸರು ಬರುತ್ತದೆ. It is a credit to your government and also our effort by Hon'ble Chief Minister and Industries Minister ಎಲ್ಲರಿಗೂ ಕ್ರೆಡಿಟ್ ಸಿಗುತ್ತದೆ, ಮೊದಲನೆಯದಾಗಿ ನಿಮಗೆ ಸಿಗುತ್ತದೆ. ಆದುದರಿಂದ, ದೇವನಹಳ್ಳಿಯಲ್ಲಿ ಏರ್‌ಪೋರ್ಟ್ ಮಾಡಿದರೆ ಅನುಕೂಲವಾಗುತ್ತದೆ.

ಶ್ರೀ ಬಿ. ಚಂದ್ರಣ್ಣ:— ಸರ್ಕಾರ ದೇವನಹಳ್ಳಿ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದ ಬಗ್ಗೆ ಹೇಳಿ ಹೇಳಿ ಸಾಕಾಗಿದೆ. ಅದರ ಬಗ್ಗೆ ಮಾತನಾಡದೆ ಸುಮ್ಮನಿದ್ದರೆ ಒಳ್ಳೆಯದು. ಇದರ ಬಗ್ಗೆ ನಮ್ಮ ಕ್ಷೇತ್ರದ ಜನರಲ್ಲಿ ಇವೊತ್ತು ಬಹಳಷ್ಟು ಗೊಂದಲವುಂಟಾಗಿದ್ದು, ಇಡೀ ರಾಜ್ಯದಲ್ಲಿ ಬಹಳಷ್ಟು ಜನರು ಅನೇಕ ತೊಂದರೆಗಳನ್ನು ಅನುಭವಿಸುತ್ತಿರುವುದರಿಂದ, ನಾವುಗಳೆಲ್ಲರೂ ಅದರ ಬಗ್ಗೆ ಮಾತನಾಡದೆ ಚರ್ಚೆ ಮಾಡಿದೆ ಸುಮ್ಮನೆ ಕುಳಿತರೆ ಒಳ್ಳೆಯದೆಂದು ನನ್ನ ಭಾವನೆ.

ಶ್ರೀ ಎನ್. ರಾಜಣ್ಣ:— ಇನ್ನು ಉದ್ಯೋಗ ಮತ್ತು ತರಬೇತಿಯಲ್ಲಿ ಕಳೆದೆರಡು ವರ್ಷಗಳಿಂದ ನಲವತ್ತು ಹೊಸ ಸರ್ಕಾರಿ ಐ.ಟಿ.ಐ.ಗಳನ್ನು ಸ್ಥಾಪಿಸಲಾಗಿದ್ದು, ಅದರಲ್ಲಿ 18 ಐ.ಟಿ.ಐ.ಗಳು ಪ್ರಾರಂಭವಾಗಿ ಕಾರ್ಯನಿರ್ವಹಿಸುತ್ತಿವೆ. ಏಕೆಂದರೆ, ಕ್ಯೂ ಇದ್ದುದ್ದನ್ನು ನಮ್ಮ ಸರ್ಕಾರ ಕಡಿಮೆ ಮಾಡಿಕೊಂಡು ಬರುತ್ತಿದೆಯೆಂದು ಹೇಳುತ್ತಿದ್ದೇನೆ. ಹಾಗೆಯೇ ಶಿಕ್ಷಣ ರಂಗದ ಬಗ್ಗೆ ಹೇಳುವುದಾದರೆ, ಕಳೆದ ನಾಲ್ಕು ವರ್ಷಗಳಲ್ಲಿ ಸರ್ಕಾರ 25, 791 ಪ್ರೈಮರಿ ಶಾಲೆಗಳನ್ನು ನಿರ್ಮಿಸಿದ್ದು, 460 ಸೆಕೆಂಡರಿ ಶಾಲೆಗಳಿಗೆ ಮಂಜೂರಾತಿ ನೀಡಿದ್ದು ಮತ್ತು 86,884 ಪ್ರೈಮರಿ ಶಾಲಾ ಶಿಕ್ಷಕರುಗಳನ್ನು ಹಾಗೂ 6,538 ಸೆಕೆಂಡರಿ ಶಾಲಾ ಶಿಕ್ಷಕರುಗಳನ್ನು ನೇಮಕಾತಿ ಮಾಡಿದೆ. Sir, is it not the greatest achievement? ಉದ್ಯೋಗಕ್ಕಾಗಿ 'ಕ್ಯೂ' ನಿಂತಿದ್ದನ್ನು ಕಡಿಮೆ ಮಾಡಲಿಲ್ಲವೇ? ಒಟ್ಟು ಒಂದು ಲಕ್ಷದಲ್ಲಿ ತೊಂಭತ್ತು ಸಾವಿರ ಜನರಿಗೆ ಉದ್ಯೋಗ ಕೊಟ್ಟಿದ್ದು, ಈ ಪೈಕಿ 45,000 ಹುದ್ದೆಗಳಿಗೆ

ಮಹಿಳೆಯರನ್ನು ಶಿಕ್ಷಕಿಯರನ್ನಾಗಿ ಸರ್ಕಾರ ನೇಮಿಸಿದೆ. ಮಹಿಳೆಯರ ಕಷ್ಟವನ್ನು ಅರ್ಥಮಾಡಿಕೊಂಡ ಸರ್ಕಾರ ಜನತಾದಳ ಸರ್ಕಾರವಾಗಿದೆ. ಆದರೆ, ಮದುವೆಯಾಗದೇ ಉಳಿದಿದ್ದ ಎಷ್ಟೋ ಜನ ಮಹಿಳೆಯರಿಗೆ ಈ ಕೆಲಸ ಸಿಗುತ್ತಿದ್ದಂತೆ ಕಳೆದ ಒಂದೆರಡು ವರ್ಷಗಳಿಂದ ಕಲ್ಯಾಣ ಮಂಟಪಗಳಿಲ್ಲವೂ ಭರ್ತಿಯಾಗಿದ್ದು, ಸಿಗುತ್ತಿಲ್ಲ.

ಶ್ರೀ ಎಂ.ಪಿ. ಪ್ರಕಾಶ್ :— ಎಂತಹ ಪಾಯಿಂಟ್ ಹೇಳಿದರು! ಮಾನ್ಯ ಅಧ್ಯಕ್ಷರೆ, ತಾವು ಇದನ್ನು ಗಮನಿಸಬೇಕು.

ಶ್ರೀ ವಾಟಾಳ್ ನಾಗರಾಜ್ :— ತಾಳಿಭಾಗ್ಯ ಶುರುವಾಯಿತು. 45,000 ಮಹಿಳೆಯರಿಗೆ ಶಿಕ್ಷಕಿಯರ ಕೆಲಸ ಸಿಕ್ಕಿದ ನಂತರ ಈಗ ಕಲ್ಯಾಣ ಮಂಟಪಗಳೆಲ್ಲವೂ ಭರ್ತಿಯಾಗುತ್ತಿದೆಯೆಂದು ಮಾನ್ಯ ಸದಸ್ಯರಾದ ರಾಜಣ್ಣನವರು ಹೇಳುತ್ತಿದ್ದಾರೆ.

ಶ್ರೀಮತಿ ಪ್ರಮೀಳಾ ನೇಸರ್ಗಿ :— ಮಾನ್ಯ ಅಧ್ಯಕ್ಷರೆ, ಇವೊತ್ತು ಮಾನ್ಯ ಸದಸ್ಯರಾದ ಅರಗ ಜ್ಞಾನೇಂದ್ರರವರು ಮಾಂಗಲ್ಯಭಾಗ್ಯ ಯೋಜನೆ ಬಗ್ಗೆ ಪ್ರಶ್ನೆ ಕೇಳಿದ್ದು, ಅದಕ್ಕೆ ಸರ್ಕಾರದವರು ಉತ್ತರಿಸಿದ್ದು, ಸದರಿ ಯೋಜನೆಯಡಿ ಮೂರು ಲಕ್ಷ ರೂಪಾಯಿಗಳನ್ನು ತೆಗೆದಿರಿಸಲಾಗಿದ್ದು, ಇಡೀ ರಾಜ್ಯದಲ್ಲಿ ಇಬ್ಬರು ಫಲಾನುಭವಿಗಳಿಗೆ ಮಾತ್ರ ಹಣ ಕೊಟ್ಟಿದ್ದೇವೆಂದು ತಿಳಿಸಿದ್ದಾರೆ.

ಅಧ್ಯಕ್ಷರು :— ಮದುವೆಯಾದವರೆಲ್ಲರೂ ಮಾಂಗಲ್ಯವನ್ನು ಕಟ್ಟಿಕೊಳ್ಳಲೇಬೇಕೆಂದು ಕಾನೂನು ಇದೆಯೇ? ಇದು ಮಾಂಗಲ್ಯ ಕಟ್ಟಿಕೊಳ್ಳುವವರಿಗಾಯಿತು. ಮಾಂಗಲ್ಯ ಕಟ್ಟಿಕೊಳ್ಳದೆ ಮದುವೆ ಮಾಡಿಕೊಳ್ಳುತ್ತೇವೆಂದರೆ?

ಶ್ರೀ ಎನ್. ರಾಜಣ್ಣ :— ತೊಂಭತ್ತು ಸಾವಿರ ಶಿಕ್ಷಕರುಗಳಲ್ಲಿ ನಲವತ್ತೈದು ಸಾವಿರ ಹುದ್ದೆಗಳಿಗೆ ಮಹಿಳೆಯರನ್ನು ಶಿಕ್ಷಕಿಯರನ್ನಾಗಿ ನೇಮಿಸಿರುವುದರಿಂದ ಮದುವೆಯಾಗದೇ ಉಳಿದಿದ್ದ ಎಷ್ಟೋ ಜನ ಮಹಿಳೆಯರು ಕಳೆದ 2-3 ವರ್ಷಗಳಿಂದ ಮದುವೆಯಾಗಲು ಪ್ರಾರಂಭಿಸಿದ್ದರಿಂದ ಎಲ್ಲಿ ಹೋದರೂ ಕಲ್ಯಾಣ ಮಂಟಪಗಳು ಸಿಗುವುದು ಕಷ್ಟವಾಗಿದೆ. ಶಿಕ್ಷಣ ಕ್ಷೇತ್ರಕ್ಕೆ ಮುಂದಿನ ವರ್ಷದಲ್ಲಿ 3037 ಕೋಟಿ ರೂಪಾಯಿಗಳನ್ನು ಕಾಯ್ದಿರಿಸಿದ್ದಾರೆ. 1994ರಲ್ಲಿ ಕೇವಲ 1459ಕೋಟಿ ರೂಪಾಯಿಗಳನ್ನು ಶಿಕ್ಷಣಕ್ಕಾಗಿ ಖರ್ಚು ಮಾಡುತ್ತಿದ್ದರು. ಆದ್ದರಿಂದ ಈಗ ಅದು ಹೆಚ್ಚು ಕಮ್ಮಿ ಎರಡು ಪಟ್ಟು ಆಗಿದೆ. In 1994, Rs.1,459 crore was spent. We have reached double. Is it not an achievement? Is it not eradication of unemployment? We have done a good job in education. ಶಿಕ್ಷಣ ಮತ್ತು ಆರೋಗ್ಯ ಕ್ಷೇತ್ರದಲ್ಲಿ ಗರಿಷ್ಟ ಪ್ರಮಾಣದಲ್ಲಿ ಸಹಾಯ ಮಾಡಿದ್ದಾರೆ. ಇನ್ನು ಮುಂದೆ ನಾನು coming to health and family welfare, Sir, the total allocation has gone from Rs.469 crore in 94-95 to Rs.1,060 crore now. ಇದು 1060 ಕೋಟಿಗೆ ತಲುಪಿದೆ. ಜನನವಾಗುತ್ತಿದ್ದಾಗ ಸಾಯುತ್ತಿದ್ದ ಮಕ್ಕಳ ಸಂಖ್ಯೆ ಈಗ ಕಡಿಮೆಯಾಗಿದೆ. ಕರ್ನಾಟಕದಲ್ಲಿ only 53% It has falled to 53%. Birth rate has also fallen from 24% to 22.7% per

thousand. Proposed extension of special assistance, ಪರಿಶಿಷ್ಟ ಜಾತಿಯ ಮಹಿಳೆಯರಿಗೆ 500 ರೂಪಾಯಿಗಳನ್ನು ಕೊಡಲು ನಮ್ಮ ಸರ್ಕಾರ ತೀರ್ಮಾನ ಮಾಡಿದೆ. ಆ ರೀತಿ ಗರ್ಭಿಣಿಯರಿಗೆ 500 ರೂಪಾಯಿಗಳನ್ನು ಕೊಡುವುದಕ್ಕಿಂತ, ನಾವು ಈಗಾಗಲೇ ತಾಯಿ ಮತ್ತು ಮಗುವಿನ ರಕ್ಷಣೆ ಕಾರ್ಯಕ್ರಮದಲ್ಲಿ 134 ಕೋಟಿ ಹಣವನ್ನು ಖರ್ಚು ಮಾಡುತ್ತಿದ್ದೇವೆ. ಅದರ ಜೊತೆಗೆ ಈ 500 ರೂಪಾಯಿಗಳು ಸಹ ಸೇರುತ್ತದೆ. ಆ ತಾಯಿ ಮತ್ತು ಮಗುವಿನ ರಕ್ಷಣೆ ಕಾರ್ಯಕ್ರಮದ ಹಣದಲ್ಲಿ 50 ಪರ್‌ಸೆಂಟ್ ಕಟ್ ಮಾಡಿ ಗರ್ಭಿಣಿಯಾಗಿರುವ ಮಹಿಳೆಯರಿಗೆ ಮಗು ಮೂರು ವರ್ಷಗಳಾಗುವವರೆಗೆ ಅರ್ಧ ಲೀಟರ್ ಹಾಲು ಮತ್ತು ಹತ್ತು ಎಂ.ಎಲ್. ಜೀನುತುಪ್ಪವನ್ನು ಕೊಡಲು ದಯಮಾಡಿ ಏರ್ಪಾಡು ಮಾಡಬೇಕು. ನಮ್ಮಲ್ಲಿ ಕೆ.ಎಂ.ಎಫ್. ಸೊಸೈಟಿಗಳು ಇಡೀ ರಾಜ್ಯದಲ್ಲೆಲ್ಲಾ ಇದೆ. ತಾವು ಐದು ನೂರು ರೂಪಾಯಿ ಕೊಡದಿದ್ದರೂ ಪರವಾಗಿಲ್ಲ ಅರ್ಧ ಲೀಟರ್ ಹಾಲನ್ನು ಮಾತ್ರ ಕೊಡುವ ವ್ಯವಸ್ಥೆ ಮಾಡಬೇಕು. ತಾಯಿ ಆರೋಗ್ಯದಿಂದ ಇರಬೇಕು, ಹಾಗಿದ್ದರೆ ಮಾತ್ರ ಮಗು ಆರೋಗ್ಯದಿಂದ ಇರುತ್ತದೆ. ಮಗು ಆರೋಗ್ಯದಿಂದ ಇದ್ದರೆ ಬುದ್ಧಿ ಚೆನ್ನಾಗಿರುತ್ತದೆ.

ಶ್ರೀಮತಿ ಪ್ರಮೀಳ ನೇಸರ್ಗಿ :— ಮಾನ್ಯ ಅಧ್ಯಕ್ಷರೆ, ಮಾನ್ಯ ರಾಜಣ್ಣನವರು ಒಳ್ಳೆಯ ವ್ಯಾಪಾರಸ್ತರು. ಮೂರು ವರ್ಷದವರೆಗೆ ಎಲ್ಲಾ ಮಕ್ಕಳಿಗೂ ಅರ್ಧ ಲೀಟರ್ ಹಾಲನ್ನು ಉಚಿತವಾಗಿ ಕೊಡಬೇಕೆಂದು ಹೇಳುತ್ತಿದ್ದಾರೆ. ಅದನ್ನು ಸರ್ಕಾರ ಒಪ್ಪಿಕೊಳ್ಳಲಿಯೆಂದು ನಾನೂ ಸಹ ಹೇಳುತ್ತಿದ್ದೇನೆ. ಆದರೆ ಆ ಹಾಲನ್ನು ಒದಗಿಸಲು ಮಾನ್ಯ ರಾಜಣ್ಣನವರು ಸಿದ್ಧರಾಗಿದ್ದಾರೆ. ಅದಕ್ಕಾಗಿ ಹೇಳುತ್ತಿದ್ದೇನೆ.

ಶ್ರೀ ಎನ್. ರಾಜಣ್ಣ :— ಚೈಲ್ಡ್ ಅಂಡ್ ಮದರ್ ಕೇರ್ ಕಾರ್ಯಕ್ರಮದಲ್ಲಿ ಈಗಾಗಲೇ 134 ಕೋಟಿ ರೂ. ಕೊಡುತ್ತಿದ್ದೀರಿ. ಆರೋಗ್ಯ ಕ್ಷೇತ್ರದಲ್ಲಿ ಕೋಟ್ಯಾಂತರ ರೂಪಾಯಿಗಳನ್ನು ಖರ್ಚು ಮಾಡುತ್ತಿದ್ದೀರಿ. ಅಮುಲ್ ಡೈರಿಯನ್ನು ಡಾ: ಕುರಿಯನ್‌ರವರು ಫಾರಂ ಮಾಡಿದರು. In India, first dairy was started in Maharashtra by great leader Vallabhabhai Patel, steel man and Morarji Desai. ಫಾಲ್ಸನ್ ಕಂಪನಿಯನ್ನು ಇಲ್ಲಿಂದ ತೊಲಗಿಸಬೇಕಾದರೆ ಕುರಿಯನ್‌ರವರು ವಿದೇಶದಲ್ಲಿ ವ್ಯಾಸಂಗ ಮಾಡಿಕೊಂಡು ಭಾರತಕ್ಕೆ ಬಂದರು, ಆ ಸಮಯದಲ್ಲಿ ಅಮೂಲ್ ಸಂಸ್ಥೆಯವರು ಕುರಿಯನ್‌ರವರನ್ನು ಕೆಲಸಕ್ಕೆ ತೆಗೆದುಕೊಂಡರು. ಅವರು ಸಂಸ್ಥೆಗೆ ಬಂದಮೇಲೆ ಅದು ಬಹಳ ಆಗಾಧವಾಗಿ ಬೆಳೆಯಿತು. ಇಂದು ಅಮುಲ್ ಸಂಸ್ಥೆಯ ಆಸ್ತಿಯೇ ಮೂರು ಸಾವಿರ ಕೋಟಿಯಾಗುತ್ತದೆ. ಯಾವುದಾದರೂ ಯೋಜನೆಗಳು ಯಶಸ್ವಿಯಾಗಿದೆಯೆಂದರೆ the green revolution and white revolution has been succeeded in India compared to the industrial revolution. ಹಾಲಿನ ಉತ್ಪಾದನೆ ಜಾಸ್ತಿಯಾದ ಮೇಲೆ, ಹಣವನ್ನು ಮಾಡುವ ಉದ್ದೇಶದಿಂದ ಕೆಲವು ಖಾಸಗಿ ಸಂಸ್ಥೆಗಳವರು ಬೇಬಿ ಫುಡ್ ತಯಾರಿಸುವ ಘಟಕವನ್ನು ಪ್ರಾರಂಭ ಮಾಡಿದರು. 1955 ರಲ್ಲಿ ಮೊದಲಬಾರಿಗೆ ಹಿಂದೂಸ್ಥಾನ್ ಲೀವರ್‌ನವರು ಬೇಬಿ ಫುಡ್ ತಯಾರುಮಾಡುವ ಕೆಲಸ ಪ್ರಾರಂಭ ಮಾಡಿದರು. ಅನಂತರ ಗ್ಲಾಕ್ಸೊರವರು ಪ್ರಾರಂಭ ಮಾಡಿದರು. ಇವರುಗಳನ್ನು ನೋಡಿಕೊಂಡು

ಅಮುಲ್‌ರವರು ಬೇಬಿ ಫುಡ್ ತಯಾರು ಮಾಡುವ ಕೆಲಸ ಮಾಡಿದರು. ಯಾವಾಗ ಬೇಬಿ ಫುಡ್ ಮಾರುಕಟ್ಟೆಗೆ ಬಂತು ಆಗ ನಗರಗಳಲ್ಲಿನ ತಾಯಿಯಂದಿರು ಮಕ್ಕಳಿಗೆ ಡಬ್ಬ ಹಾಲು ಕೊಡಲು ಪ್ರಾರಂಭ ಮಾಡಿದರು. ವೈದ್ಯರುಗಳೂ ಸಹ ತಾಯಿಯಂದಿರಿಗೆ ತಾವು ಎದೆ ಹಾಲನ್ನು ಕುಡಿಸಿದರೆ ನಿಶಕ್ತರಾಗುತ್ತೀರಿ ಆದ್ದರಿಂದ ಡಬ್ಬ ಹಾಲನ್ನು ಕೊಡಿ ಎಂದು ಸಲಹೆ ಕೊಡುತ್ತಿದ್ದರು. ಎದೆ ಹಾಲನ್ನು ಕೊಡುವುದನ್ನು ನಿಲ್ಲಿಸಿದ ತಾಯಿಯಂದಿರಿಗೂ ಕೊನೆಯಲ್ಲಿ ತೊಂದರೆ ಬಂತು. ಡಬ್ಬ ಹಾಲನ್ನು ಕೊಟ್ಟಿದ್ದರಿಂದ ಮಕ್ಕಳಿಗೆ ಡಬ್ಬ ಬುದ್ದಿ ಬಂತು. ಈಗ 90 ಪರ್‌ಸೆಂಟ್ ಮಕ್ಕಳಿಗೆ ಡಬ್ಬ ಬುದ್ದಿಯೇ ಇರುವುದು.

ಶ್ರೀ ವಾಟಾಳ್ ನಾಗರಾಜ್ :— ಮಾನ್ಯ ಸದಸ್ಯರು ಡಬ್ಬ ಬುದ್ದಿ ಮತ್ತು ಬಾಟಲ್ ಬುದ್ಧಿ ಎಂದರೆ ಯಾವುದು ಎಂದು ದಯಮಾಡಿ ಮಾರ್ಗದರ್ಶನ ನೀಡಬೇಕು.

ಅಧ್ಯಕ್ಷರು :— ಆ ವಿವರಣೆಯನ್ನು ಇವತ್ತು ಹೇಳಿಸುವುದಿಲ್ಲ, ಇನ್ನೊಂದು ದಿವಸ ಹೇಳಿಸುತ್ತೇನೆ. ಇವತ್ತು ಅದರ ಬಗ್ಗೆ ತಾವು ಹೇಳಬೇಡಿ.

ಶ್ರೀ ಎನ್ ರಾಜಣ್ಣ :— ಇದರ ಬಗ್ಗೆ ಹೇಳಬೇಕಾದರೆ ಬಹಳ ಇದೆ. ಮಾನ್ಯ ಸುರೇಶ್ ಕುಮಾರ್‌ರವರು ನಿನ್ನೆ ಮಾತನಾಡುತ್ತಾ ಕಾಲೇಜುಗಳಲ್ಲಿ ಯಾವ ಗತಿಯಾಗುತ್ತಿದೆ ಎಂಬ ಬಗ್ಗೆ ಹೇಳಿದರು. ಇದೆಲ್ಲದ್ದಕ್ಕೂ ಇದೂ ಸಹ ಒಂದು ಕಾರಣವಾಗಿದೆ. ಇವತ್ತು ಮಗು ಜನನವಾಗಬೇಕಾದರೆ ತಾಯಿ ತಂದೆ ಇಬ್ಬರು ಆರೋಗ್ಯದಿಂದ ಇರಬೇಕು. ಆಗಲೇ ಆ ಮಗು ಆರೋಗ್ಯವಾಗಿ ಬರುವುದು. ಮಗು ಹುಟ್ಟುವಾಗಲೇ ಅನಾರೋಗ್ಯದಿಂದ ಬಂದರೆ ಮುಂದೆ ಏನು ಮಾಡಿದರೂ ಸಹ ಮಗುವಿನ ಆರೋಗ್ಯ ಸರಿಯಾಗುವುದಿಲ್ಲ. Hence give more preference to the child before the birth, to the mother. this is my request. If child is born with good health, the child will have a good character. The child will study and then he will become a gentleman of the state and the country.

MR. SPEAKER :— Jai Karnataka.

SRI N. RAJANNA :— Regarding Health, ಐ.ಪಿ.ಪಿ. ಪ್ರಾಜೆಕ್ಟ್‌ನ್ನು ಇಡೀ ಭಾರತದಲ್ಲಿ ಪ್ರಾರಂಭ ಮಾಡಿದ್ದಾರೆ. ಬೆಂಗಳೂರಿನಲ್ಲಿ ಬಹಳ ಜನ ವೈದ್ಯರುಗಳು ಇದ್ದಾರೆ. Asian Development Association part of the World Bank, loan through Government of India, ನಿಂದ ಬೆಂಗಳೂರು ಮಹಾನಗರ ಪಾಲಿಕೆಗೆ 40 ಕೋಟಿ ರೂಪಾಯಿಗಳನ್ನು ಐ.ಪಿ.ಪಿ ಸಹಾಯಧನವನ್ನಾಗಿ ಕೊಟ್ಟಿದ್ದಾರೆ. ಈ ರೀತಿ ಐ.ಪಿ.ಪಿ. ಏಡ್‌ನ್ನು ಕೊಟ್ಟಿರುವುದು ಒಳ್ಳೆಯದೇ. ಆದರೆ ಇದರ ಸಾಧನೆ ಯಾವ ಮಟ್ಟಕ್ಕೆ ಬರುತ್ತದೆ ಎಂಬುದು ನನಗೆ ಚಿಂತೆಯಾಗಿದೆ. ಆದರೆ ಅಧಿಕಾರಿಗಳು ಒಳ್ಳೆಯ ಕೆಲಸ ಮಾಡುತ್ತಿದ್ದಾರೆ. ಕರ್ನಾಟಕದಲ್ಲಿರುವ ಬೇರೆ ಪಟ್ಟಣಗಳಿಗೆ 27 ಕೋಟಿ ರೂ.ಗಳನ್ನು ಐ.ಪಿ.ಪಿ. ಏಡ್ ಆಗಿ ಕೊಟ್ಟಿದ್ದಾರೆ. ಬೆಂಗಳೂರು ನಗರದಲ್ಲಿ 55 ಆರೋಗ್ಯ ಕೇಂದ್ರಗಳು ಪ್ರಾರಂಭವಾಗಿದೆ. 13 ಮೆಟರ್ನಿಟಿ ಹೋಮ್ಸ್‌ಗಳಾಗಿದೆ. 14 ಮೆಟರ್ನಿಟಿ ಹೋಮ್ಸ್‌ಗಳನ್ನು

ಅಪ್‌ಗ್ರೇಡ್ ಮಾಡಿದ್ದಾರೆ. 7 ಸಿಬ್ಬಂದಿ ಗೃಹಗಳನ್ನು ಕಟ್ಟಿದ್ದಾರೆ. To motivate the IPP in slum area, ಬೆಂಗಳೂರು ನಗರದ ಕೊಳಚೆ ಪ್ರದೇಶಗಳಲ್ಲಿ 2001ಕ್ಕೆ ಎಲ್ಲಾ ಖರ್ಚನ್ನು ಬೆಂಗಳೂರು ಮಹಾನಗರಪಾಲಿಕ ಕೊಡಬೇಕಾಗುತ್ತದೆ. 40 ಕೋಟಿ ರೂ. ಖರ್ಚಾಗಿದ್ದು, ಅದಕ್ಕೆ ಆಗುವ ಬರ್ಡನ್ ಏನು ಎಂಬ ಬಗ್ಗೆ ಯೋಚನೆ ಮಾಡಬೇಕಾಗಿದೆ. ವರ್ಷಕ್ಕೆ ಐದು ಕೋಟಿರೂ.ಗಳನ್ನು ಬೆಂಗಳೂರು ಮಹಾನಗರ ಪಾಲಿಕೆಯಿಂದ ಕಟ್ಟಬೇಕಾಗುತ್ತದೆ. ಭಾರತದ ಮೊದಲ ಪ್ರಧಾನಮಂತ್ರಿಗಳಾದ ಪಂಡಿತ್ ಜವಾಹರಲಾಲ್ ನೆಹರೂ ಅವರ ಕಾಲದಲ್ಲಿ ಫ್ಯಾಮಿಲಿ ಪ್ಲಾನಿಂಗ್ ಶುರುವಾಯಿತು. ಮೊದಲು ಎರಡು ಸಾಕು ಮೂರು ಬೇಡ ನಂತರ ಆರತಿಗೊಬ್ಬ ಮಗ ಕೀರ್ತಿಗೊಬ್ಬ ಮಗಳು ತದನಂತರ ಈಗ ಒಂದು ಕುಟುಂಬಕ್ಕೆ ಒಂದೇ ಮಗು ಇತ್ಯಾದಿ ಕುಟುಂಬ ಕಲ್ಯಾಣ ಯೋಜನೆಯ ಘೋಷಣೆಗಳು ತಮಗೂ ಗೊತ್ತಿರಬಹುದು. ಆದರೆ ಈ ಘೋಷಣೆಗಳು ಎಷ್ಟರಮಟ್ಟಿಗೆ ಕಾರ್ಯಗತಗೊಳಿಸುತ್ತಿದ್ದೇವೆ ಎಂಬುದು ಬಹಳ ಮುಖ್ಯ. ಈ ದೇಶಕ್ಕೆ ಸ್ವಾತಂತ್ರ್ಯ ಬಂದಾಗ ಅದರ ಜನಸಂಖ್ಯೆ ಕೇವಲ 30 ಕೋಟಿ ಆಗಿತ್ತು. ಮೊನ್ನೆ ಬಿಡುಗಡೆಯಾದ ವಿಧಾನ ಮಂಡಲದ ಇತಿಹಾಸ ಪುಸ್ತಕದಲ್ಲಿ ಈ ವಿವರಗಳಿವೆ. 1920ರಲ್ಲಿ ಕರ್ನಾಟಕ ರಾಜ್ಯದಲ್ಲಿ ಕೇವಲ 60 ಲಕ್ಷ ಜನಸಂಖ್ಯೆ ಇತ್ತು. ಬೆಂಗಳೂರು ಜೈಲಿನಲ್ಲಿದ್ದ 14 ಜನರನ್ನು ಬಿಟ್ಟರೆ ಆಗ ಕ್ರಿಮಿನಲ್‌ಗಳೇ ಇರಲಿಲ್ಲ. ಮೊನ್ನೆ ಒಬ್ಬ ಸದಸ್ಯರು ಮಾತನಾಡುತ್ತಾ ಕ್ರಿಮಿನಲ್‌ಗೆ ಇಲಾಖೆಯೊಂದನ್ನು ಮಾಡಬೇಕೆಂದರು ಬಂಗಾರದಂತಹ ಅಂತಹ ಕಾಲದಲ್ಲಿ ಕ್ರಿಮಿನಲ್‌ಗೆ ಪ್ರತ್ಯೇಕ ಇಲಾಖೆಯ ಅಗತ್ಯವೇ ಇರಲಿಲ್ಲ. ಇವತ್ತು ನಮ್ಮ ಜನಸಂಖ್ಯೆ ಹೆಚ್ಚಾಗಿ ಯಾವ ಮಟ್ಟಕ್ಕೆ ಮುಟ್ಟಿದೆ ಎಂಬ ಬಗ್ಗೆ ನಾವು ಬಹಳ ಗಂಭೀರವಾಗಿ ಚಿಂತನೆ ಮಾಡಬೇಕು. ನಾನು ಬೇರೆಯವರು ಜನಸಂಖ್ಯೆ ನಿಯಂತ್ರಣದ ಬಗ್ಗೆ ಚಿಂತನೆ ಮಾಡಬೇಕು ಎಂದು ಹೇಳುವಾಗ ನಾನು ಅದರ ಬಗ್ಗೆ ಮೊದಲು ಚಿಂತನೆ ಮಾಡಿರಬೇಕು. ನಾನು ಅದರ ಬಗ್ಗೆ ಚಿಂತನೆ ಮಾಡಿಯೇ 1974 ರಲ್ಲೇ ನನಗೆ ಮೂರು ಮಕ್ಕಳಾದ ನಂತರ ವ್ಯಾಸೆಕ್ಟಮಿ ಆಪರೇಷನ್ ಮಾಡಿಸಿಕೊಂಡಿದ್ದೇನೆ. ಈ ಕುಟುಂಬ ಯೋಜನೆಯನ್ನು ಕಡ್ಡಾಯವಾಗಿ ಮಾಡಬೇಕು. ಭಾರತದ ಪ್ರಥಮ ಗೌರ್ನರ್ ಜನರಲ್ ಆಗಿದ್ದ ಡಾ: ರಾಜಗೋಪಾಲಚಾರಿ ಮತ್ತು ಇತರ ಕೆಲವು ವಿಜ್ಞಾನಿಗಳು 1940 ರಲ್ಲಿ ಭಾರತಕ್ಕೆ ಇಮ್ಯುನೈಸೇಷನ್ ಪ್ರೋಗ್ರಾಮ್ ಬೇಡ ಎಂದು ಹೇಳಿದ್ದರು. ಅವತ್ತು ಅವರ ಮಾತನ್ನು ಕೇಳಿದ್ದರೆ ಇಂದು ಈ ದೇಶಕ್ಕೆ ಇಂತಹ ಪರಿಸ್ಥಿತಿ ಬರುತ್ತಿರಲಿಲ್ಲ, ಎಲ್ಲಾ ನೆಮ್ಮದಿಯಾಗಿ ಇರಬಹುದಾಗಿತ್ತು. ನಮ್ಮ ದೇಶದ ಜನಸಂಖ್ಯೆ ಇವತ್ತು 100 ಕೋಟಿಗೆ ಮುಟ್ಟಿದೆ. ಯಾವುದೇ ಸರ್ಕಾರ ಅಧಿಕಾರಕ್ಕೆ ಬರಲಿ ಅಥವಾ ಹೋಗಲಿ, ನಾವು ಜನಸಂಖ್ಯೆ ನಿಯಂತ್ರಣದ ಬಗ್ಗೆ ಗಂಭೀರವಾಗಿ ಚಿಂತನೆ ಮಾಡಲಿಲ್ಲವೆಂದರೆ ಬಹಳ ಕಷ್ಟವಾಗುತ್ತದೆ. We have succeeded in green revolution, we have succeeded in while revolution, we have succeeded in industrial revolution, but we have not succeeded in controlling the population of this country. We are building castles in the air. ಬೆಳೆಯುತ್ತಿರುವ ಜನಸಂಖ್ಯೆಯಿಂದಾಗಿ ನಾವು ಎಷ್ಟೇ ಕೆಲಸ ಮಾಡಿದರೂ ಕೂಡ ಅದು ಜನರ ಕಣ್ಣಿಗೆ ಕಾಣದೇ ಹೋಗುತ್ತಿದೆ. ಇನ್ನೊಂದು ಮಾತನ್ನು ನಾನು ಈ ಸಂದರ್ಭದಲ್ಲಿ

ಹೇಳಲಿಕ್ಕೆ ಇಚ್ಛಿಪಡುತ್ತೇನೆ. 1920ರಿಂದ 1930ರ ನಡುವಿನ ಹತ್ತು ವರ್ಷಗಳ ಅವಧಿಯಲ್ಲಿ ಭಾರತದ ಜನಸಂಖ್ಯೆ ಯಾವುದೇ ಹೆಚ್ಚಳವಿಲ್ಲದೆ 25 ಕೋಟಿಯಲ್ಲೇ ನಿಂತಿತ್ತು. ಹಿಂದೆ ಪ್ರಕೃತಿಯೇ ಜನನ ಪ್ರಮಾಣವನ್ನು ನಿಯಂತ್ರಿಸುತ್ತಿತ್ತು. ಆರೋಗ್ಯವಂತ ಮಕ್ಕಳು ಮಾತ್ರ ಉಳಿದುಕೊಳ್ಳುತ್ತಿದ್ದರು. ಉದಾಹರಣೆಗೆ ಹೇಳುವುದಾದರೆ, ಡಾ: ಅಂಬೇಡ್ಕರ್‌ರವರ ಕುಟುಂಬದಲ್ಲಿ 14 ಜನ ಮಕ್ಕಳು ಜನಿಸಿದ್ದರು, ಆದರೆ ಅವರಲ್ಲಿ 4 ಜನ ಮಾತ್ರ ಬದುಕುಳಿದರು. ಅವರಲ್ಲಿ ಡಾ: ಅಂಬೇಡ್ಕರ್‌ರವರೂ ಕೂಡ ಒಬ್ಬರು. ಆದರೆ ಈಗ 14 ಮಕ್ಕಳು ಹುಟ್ಟಿದರೆ 14 ಮಕ್ಕಳನ್ನು ಉಳಿಸಿಕೊಳ್ಳುವುದಕ್ಕೆ ನಾವು ಪ್ರಯತ್ನ ಮಾಡುತ್ತೇವೆ. ಆದರೆ ಅವರಲ್ಲಿ ಒಬ್ಬರೂ ಪ್ರಯೋಜನವಂತರಾಗುವುದಿಲ್ಲ. ಇವತ್ತಿನ ಆಧುನಿಕ ಆಹಾರ, ಔಷಧಿಗಳೂ ಕೂಡ ಆರೋಗ್ಯ ಕೆಡಲು ಕಾರಣವಾಗಿದೆ. ಈವತ್ತು ಬೆಂಗಳೂರು ನಗರದಲ್ಲಿ ಶೇಕಡಾ 50ರಷ್ಟು ಜನಸಂಖ್ಯೆಗೆ 3-4 ಸೆನ್ಸ್ ಇರುವುದು 5-6 ಇಲ್ಲ. ಇವತ್ತು ಬೆಳವಣಿಗೆಯ ಪ್ರಮಾಣ ಕುಂಠಿತವಾಗಿದೆ. ಹಿಂದೆ 1950-60 ರವರೆಗೂ ಐದೂ ಮುಕ್ಕಾಲರಿಂದ ಆರು ಅಡಿಗಳವರೆಗೆ ಮಕ್ಕಳು ಬೆಳವಣಿಗೆ ಹೊಂದುತ್ತಿದ್ದರೆ ಇಂದು ವಿಶೇಷವಾಗಿ ಬೆಂಗಳೂರಿನಲ್ಲಿ ಮಕ್ಕಳು ನಾಲ್ಕೂಮುಕ್ಕಾಲರಿಂದ ಐದು ಅಡಿಗಳವರೆಗೆ ಮಾತ್ರ ಬೆಳೆಯುತ್ತಿದ್ದಾರೆ. ಈ ರೀತಿ ಆರೋಗ್ಯ ಬಹಳಷ್ಟು ಕೆಟ್ಟು ಹೋಗಿದೆ.

ಅಧ್ಯಕ್ಷರು :— ಮಾನ್ಯ ರಾಜಣ್ಣನವರೇ, ಈ ಸಭೆಯಲ್ಲಿ ಬಹಳ ಚೆನ್ನಾಗಿ ಮಾತನಾಡುವವರಲ್ಲಿ ತಾವೂ ಕೂಡ ಒಬ್ಬರು. ಆದರೆ ಇವತ್ತು ನಿಮಗೆ ಮಾತನಾಡಲು ಹೆಚ್ಚಿನ ಕಾಲಾವಕಾಶ ಕೊಡಲು ನನಗೆ ಸಾಧ್ಯವಾಗುತ್ತಿಲ್ಲ. ತಾವು ರಾಜ್ಯಪಾಲರ ಭಾಷಣದ ವಂದನಾ ನಿರ್ಣಯದ ಮೇಲಿನ ಚರ್ಚೆಯಲ್ಲಿ ಕೂಡ ಭಾಗವಹಿಸುವ ಸಂಭವವಿದೆ. ಆ ಸಂದರ್ಭದಲ್ಲಿ ಮತ್ತು ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಮೇಲೆ ಮಾತನಾಡುವಾಗ ನೀವು ಬಹಳಷ್ಟು ವಿಚಾರಗಳನ್ನು ಹೇಳಲು ಅವಕಾಶವಿದೆ. ಆದುದರಿಂದ ದಯವಿಟ್ಟು ತಮ್ಮ ಭಾಷಣ ಇವತ್ತು ಮುಗಿಸಿಬಿಡಿ.

ಶ್ರೀ ಎನ್. ರಾಜಣ್ಣ :— ಆಯಿತು ಸಾರ್. ಮುಂದೆ ಮಾತನಾಡಲು ಅವಕಾಶ ಸಿಕ್ಕಾಗ ನಾನು ಇನ್ನಷ್ಟು ವಿಚಾರಗಳನ್ನು ಹೇಳುತ್ತೇನೆ. ಇದುವರೆಗೂ ನನಗೆ ಇಷ್ಟು ಮಾತನಾಡಲು ಅವಕಾಶ ಮಾಡಿಕೊಟ್ಟ ಮಾನ್ಯ ಸಭಾಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಅಧ್ಯಕ್ಷರು :— ಈಗ ಸದನವನ್ನು ಮುಂದೂಡುತ್ತಿದ್ದೇನೆ. ಸದನವು ನಾಳೆ ಬೆಳಿಗ್ಗೆ ಹತ್ತು ಗಂಟೆಗೆ ಪುನಃ ಸೇರಲಿದೆ.

(ಸದನವು ಸಂಜೆ 6 ಗಂಟೆ 45 ನಿಮಿಷಕ್ಕೆ ಮುಂದೂಡಲ್ಪಟ್ಟು ದಿನಾಂಕ 26ನೇ ಮಾರ್ಚ್ 1999ರಂದು ಶುಕ್ರವಾರ ಬೆಳಿಗ್ಗೆ 10 ಗಂಟೆಗೆ ಸೇರಲು ನಿಶ್ಚಯಿಸಿತು.)

(+ ಈ ಚಿಹ್ನೆ ಮಾನ್ಯ ಸದಸ್ಯರ ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.)